ಸಂಪಾದಕರು :
ಎಂ.ಎಸ್. ವಿಕಾಸ್

ಶನಿವಾರ, ಡಿಸೆಂಬರ್ 30, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 227 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999



## ಇ-ಕೆ.ವೈ.ಸಿ. ಮಾಡಿಸಲು ಮುಗಿಬಿದ್ದ ಜನ

### ಅಡುಗೆ ಸಿಲಿಂಡರ್ ಬಗ್ಗೆ ಜಿಲ್ಲಾದ್ಯಂತ ಹರಡಿದ ಗಾಳಿ ಸುದ್ದಿ ಹಿನ್ನೆಲೆ

ದಾವಣಗೆರೆ, ಡಿ. 29 – ಅಡುಗೆ ಅನಿಲದ ಸಿಲಿಂಡರ್ ಹೊಂದಿರುವವರು ಇ-ಕೆ.ವೈ.ಸಿ. ಮಾಡಿಸುವ ಸಂಬಂಧ ಹರಡಿದ ಗಾಳಿ ಸುದ್ದಿಯ ಕಾರಣದಿಂದಾಗಿ ಸಾರ್ವಜನಿಕರು ಅಡುಗೆ ಅನಿಲ ವಿತರಣಾ ಕೇಂದ್ರಗಳ ಎದುರು ಮುಗಿಬೀಳುತ್ತಿರುವುದು ಕಂಡು ಬರುತ್ತಿದೆ.

ಗ್ರಾಹಕರು ಒಂದೇ ಹೆಸರಿನಲ್ಲಿ ಹೆಚ್ಚು ಅಡುಗೆ ಅನಿಲದ ಸಿಲಿಂಡರ್ ಹೊಂದುವುದಕ್ಕೆ ಕಡಿವಾಣ ಹಾಕಲು ಹಾಗೂ ಸಬ್ಸಿಡಿ ದುರ್ಬಳಕೆ ತಡೆಯಲು ಇ-ಕೆ.ವೈ.ಸಿ. ಮಾಡಿಸಲು ಸೂಚನೆ ನೀಡಲಾಗಿತ್ತು.

ಆದರೆ, ಇ- ಕೆ.ವೈ.ಸಿ. ಮಾಡಿಸಲು ಡಿಸೆಂಬರ್ 31 ಕೊನೆ ದಿನ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹರಿದಾಡಿದೆ. ಇದನ್ನು ನಂಬಿಕೊಂಡು ಜನರು ಇ-ಕೆ.ವೈ.ಸಿ. ಮಾಡಿಸಲು ಅಡುಗೆ ಅನಿಲ ವಿತರಣಾ ಕೇಂದ್ರಗಳಿಗೆ ಮುಗಿ ಬೀಳುತ್ತಿದ್ದಾರೆ.

ಇ-ಕೆ.ವೈ.ಸಿ. ಮಾಡಿಸಲು ಯಾವುದೇ ಗಡುವಿಲ್ಲ ಎಂದು ಅನಿಲ ಸಿಲಿಂಡರ್ ವಿತರಕರು ಹೇಳುತ್ತಿದ್ದರೂ, ಜನರು ಕಿವಿಗೊಡುವ ಸ್ಥಿತಿಯಲ್ಲಿಲ್ಲ.

ಅಡುಗೆ ಅನಿಲ ಸಿಲಿಂಡರ್ ಸಂಪರ್ಕ ಹೊಂದಿರುವವರು ಇ-ಕೆ.ವೈ.ಸಿ. ಮಾಡಿಸಲು ಕೇಂದ್ರ ಸರ್ಕಾರ ಸೂಚನೆ ನೀಡಿದೆ. ಆದರೆ, ಇದಕ್ಕೆ ಯಾವುದೇ ಕೊನೆಯ ದಿನಾಂಕ ಇಲ್ಲ. ಇದಕ್ಕಾಗಿ ಆಧಾರ್ ಕಾರ್ಡ್ ಹಾಗೂ ಅಡುಗೆ ಅನಿಲ ಸಂಪರ್ಕದ ಕಾರ್ಡುಗಳನ್ನು ತಂದರೆ ಸಾಕು ಎಂದು ಅಧಿಕಾರಿಗಳು ಸ್ಪಷ್ಟನೆ ನೀಡಿದ್ದಾರೆ. ಅಲ್ಲದೇ, ಅನಿಲ ಸಿಲಿಂಡರ್ ವಿತರಣಾ ಕೇಂದ್ರದ ಸಿಬ್ಬಂದಿಯೇ (4ನೇ ಪುಟಕ್ಕೆ)

**ಕಾಲಮಿತಿ ಇಲ್ಲ**

**ಅಡುಗೆ ಅನಿಲ ಸಂಪರ್ಕ ಹೊಂದಿರುವ ಫಲಾನುಭವಿಗಳು ಆಧಾರ್ ಸಂಖ್ಯೆಯ ದಾಖಲೆಯೊಂದಿಗೆ ತಮ್ಮ ಗ್ಯಾಸ್ ಏಜೆನ್ಸಿಗೆ ಭೇಟಿ ನೀಡಿ ಉಚಿತವಾಗಿ ಇ-ಕೆವೈಸಿ ದೃಢೀಕರಣ ನೀಡಬೇಕು. ಆದರೆ ಇದಕ್ಕೆ ಯಾವುದೇ ಕಾಲಮಿತಿ ಇಲ್ಲ ಮತ್ತು ಇ-ಕೆವೈಸಿಗೆ ಹಣ ನೀಡುವಂತಿಲ್ಲ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಉಪನಿರ್ದೇಶಕ ಶಿದ್ರಾಮ ಮಾರಿಹಾಳ್ ಸ್ಪಷ್ಟನೆ ನೀಡಿದ್ದಾರೆ.**

## ಕಳುವಾಗಿದ್ದ 5.18 ಕೋಟಿ ರೂ. ಮೌಲ್ಯದ ಸ್ವತ್ತು ಪತ್ತೆ, ಹಸ್ತಾಂತರ




ದಾವಣಗೆರೆ, ಡಿ. 29 - ಜಿಲ್ಲೆಯಲ್ಲಿ ಈ ವರ್ಷ 1,032 ಕಳ್ಳತನದ ಪ್ರಕರಣಗಳು ವರದಿಯಾಗಿದ್ದು, ಈ ಪೈಕಿ 319 ಪ್ರಕರಣಗಳಲ್ಲಿ ಕಳುವಾದ ಸರಕುಗಳನ್ನು ಪತ್ತೆ ಮಾಡಲಾಗಿದೆ. ಈ ರೀತಿ ಪತ್ತೆ ಮಾಡಲಾದ ಸರಕಿನ ಮೌಲ್ಯ 5.18 ಕೋಟಿ ರೂ. ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ತಿಳಿಸಿದ್ದಾರೆ.

ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಕಳವು ಪ್ರಕರಣಗಳಲ್ಲಿ ವಶಪಡಿಸಿಕೊಂಡ ಸ್ವತ್ತುಗಳನ್ನು ವಾರಸುದಾರರಿಗೆ ಹಿಂದಿರುಗಿಸುವ, ಕಳುವಾದ ಆಸ್ತಿ ಸ್ವತ್ತು ಪ್ರದರ್ಶನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಪಾಲ್ಗೊಂಡ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಉಮಾ ಪ್ರಶಾಂತ್, ಡಿಸೆಂಬರ್ ತಿಂಗಳನ್ನು ಅಪರಾಧ ತಡೆ ಮಾಸವಾಗಿ ಆಚರಿಸಲಾಗುತ್ತದೆ. ಇದರ ಅಂಗವಾಗಿ ಕಳುವಾದ ಆಸ್ತಿ ಮರಳಿಸುವ ಹಾಗೂ ಪ್ರದರ್ಶಿಸುವ ಪ್ರಕ್ರಿಯೆ ಕೈಗೊಳ್ಳಲಾಗಿದೆ ಎಂದರು.

ಈ ವರ್ಷ 13.48 ಕೋಟಿ ರೂ. ಮೊತ್ತದ ಸ್ವತ್ತುಗಳು ಕಳುವಾಗಿವೆ. ಇದೇ ವರ್ಷ 5,18,93,743 ರೂ. ಮೊತ್ತದ ಸ್ವತ್ತು ಪತ್ತೆ ಮಾಡಲಾಗಿದೆ ಎಂದರು.

2.24 ಕೋಟಿ ರೂ. ಮೊತ್ತದ 4493 ಗ್ರಾಂ ಬಂಗಾರ, 35.56 ಲಕ್ಷ ರೂ. ಮೊತ್ತದ 50,183 ಗ್ರಾಂ ಬೆಳ್ಳಿ, 84.75 ಲಕ್ಷ ರೂ. ಮೊತ್ತದ 175 ದ್ವಿಚಕ್ರ ವಾಹನ ಹಾಗೂ 65.35 ಲಕ್ಷ ರೂ. ಮೊತ್ತದ ನಾಲ್ಕು ಚಕ್ರದ ವಾಹನಗಳನ್ನು ಪತ್ತೆ ಮಾಡಲಾಗಿದೆ ಎಂದವರು ವಿವರಿಸಿದರು.

2021ರಲ್ಲಿ 2.35 ಕೋಟಿ ರೂ. ಹಾಗೂ 2022ರಲ್ಲಿ 4.27 ಕೋಟಿ ರೂ. ಮೊತ್ತದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಈ ಬಾರಿ ಪತ್ತೆ ಮಾಡಲಾದ ಆಸ್ತಿಗಳ ಮೊತ್ತ ಹೆಚ್ಚಾಗಿದೆ ಎಂದವರು ತಿಳಿಸಿದರು.

ಬಸವನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪವನ್ ಜ್ಯುವೆಲರ್ಸ್‌ನಿಂದ 30 ಕೆ.ಜಿ. ಬೆಳ್ಳಿ ಕಳುವಾಗಿದ್ದನ್ನು ಪತ್ತೆ ಮಾಡಲಾಗಿದೆ. ವಿದ್ಯಾನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ವಜ್ರ ಕಳ್ಳತನ ಪ್ರಕರಣವನ್ನು ಪತ್ತೆ ಮಾಡಲಾಗಿದೆ ಎಂದವರು ಹೇಳಿದರು. ಕಳ್ಳತನ ತಡೆಗೆ ಬೀಟ್ ಹಾಗೂ ನೈಟ್ ರೌಂಡ್ಸ್ ಸೇರಿದಂತೆ ಅನೇಕ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಕಳುವಾದ ಸ್ವತ್ತುಗಳನ್ನು ಪತ್ತೆ ಮಾಡುವಲ್ಲಿ ಉತ್ತಮ ಕೆಲಸ ಮಾಡಿದ ಪೊಲೀಸರಿಗೆ ಪ್ರಶಂಸನಾ ಪತ್ರ ಹಾಗೂ ಬಹುಮಾನ ನೀಡಲಾಗಿದೆ ಎಂದೂ ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಕಕ್ಕರಗೊಳ್ಳದ ಮಂಜಪ್ಪ, ಆರು ತಿಂಗಳ ಹಿಂದೆ ನಾವು ಹಬ್ಬಕ್ಕೆಂದು ಹೋದಾಗ ಬಾಗಿಲು ಮುರಿದು ಐದು ತೊಲ ಬಂಗಾರ ಕಳ್ಳತನವಾಗಿತ್ತು ಎಂದರು.

ನಾಣ್ಯಗಳಲ್ಲೇ 50 ಸಾವಿರ ರೂ.ಗಳನ್ನು ಕೂಡಿಸಿಟ್ಟಿದ್ದೂ ಕಳ್ಳತನವಾಗಿತ್ತು. ಕದ್ದ ಬಂಗಾರವನ್ನು ಕರಗಿಸಲಾಗಿದೆ. ನಮಗೆ ಈಗ 4.5 ತೊಲ ಬಂಗಾರ ಕೊಡಲಾಗಿದೆ. (4ನೇ ಪುಟಕ್ಕೆ)

## ಅತಿಥಿ ಉಪನ್ಯಾಸಕರ ವೇತನ 5 ಸಾವಿರ ರೂ. ಹೆಚ್ಚಳ

ಬೆಂಗಳೂರು, ಡಿ. 29 - ಸರ್ಕಾರಿ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ 7,800 ಉಪನ್ಯಾಸಕ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ತಿಳಿಸಿರುವ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್, ಅತಿಥಿ ಉಪನ್ಯಾಸಕರ ಮಾಸಿಕ ವೇತನದಲ್ಲಿ 5,000 ರೂ. ಹೆಚ್ಚಳ ಮಾಡಲು ತೀರ್ಮಾನಿಸಲಾಗಿದೆ ಎಂದಿದ್ದಾರೆ.

**ಸದ್ಯಕ್ಕೆ ಅತಿಥಿ ಉಪನ್ಯಾಸಕರ ಖಾಯಂ ಇಲ್ಲ - ಸುಧಾಕರ್**

ಮುಷ್ಕರ ನಿರತ ಅತಿಥಿ ಉಪನ್ಯಾಸಕರ ಸಂಘಟನೆಗಳ ಜೊತೆ ಇಂದಿಲ್ಲಿ ಚರ್ಚೆ ನಡೆಸಿದ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಸಚಿವರು, ಅತಿಥಿ ಉಪನ್ಯಾಸಕರನ್ನು ಸದ್ಯಕ್ಕೆ ಖಾಯಂ ಮಾಡಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಮುಂದಿನ ನೇಮಕಾತಿ ಸಂದರ್ಭದಲ್ಲಿ ಐದರಿಂದ 10 ವರ್ಷಗಳ ಕಾಲ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿರುವವರಿಗೆ ವರ್ಷಕ್ಕೆ ಒಂದು ಅಂಕದಂತೆ ಐದು ಗರಿಷ್ಠ ಅಂಕಗಳನ್ನು ನೀಡಲು ತೀರ್ಮಾನಿಸಲಾಗಿದೆ.

ಇದರಿಂದ 300 ಅಂಕಗಳ ಪರೀಕ್ಷೆಯಲ್ಲಿ 15 ಕೃಪಾಂಕಗಳು ಇವರಿಗೆ ಲಭ್ಯವಾಗಲಿವೆ, ಹಾಲಿ 1,800 ಉಪನ್ಯಾಸಕರ ನೇಮಕಾತಿ ಚಾಲನೆ ಯಲ್ಲಿದ್ದು ಮತ್ತೆ 6,000 ಉಪನ್ಯಾಸಕರ (4ನೇ ಪುಟಕ್ಕೆ)

## ಪಿಎಂ ಆವಾಸ್ ಯೋಜನೆಯಡಿ 4 ಕೋಟಿಗೂ ಅಧಿಕ ಮನೆಗಳ ನಿರ್ಮಾಣ: ಪ್ರಹ್ಲಾದ್ ಜೋಷಿ



ದಾವಣಗೆರೆ, ಡಿ.29- ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ಕಳೆದ 10 ವರ್ಷಗಳಲ್ಲಿ ದೇಶದ ಬಡವರಿಗಾಗಿ 4 ಕೋಟಿಗೂ ಅಧಿಕ ಮನೆಗಳನ್ನು ನಿರ್ಮಾಣ ಮಾಡಿಕೊಡಲಾಗಿದೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳು, ಕಲ್ಲಿದ್ದಲು ಮತ್ತು ಗಣಿ ಖಾತೆ ಸಚಿವ ಪ್ರಹ್ಲಾದ್ ಜೋಶಿ ತಿಳಿಸಿದರು.

ದಾವಣಗೆರೆ ತಾಲ್ಲೂಕಿನ ಹೆಮ್ಮನಬೇತೂರು ಗ್ರಾಮದಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ವಿಕಸಿತ ಭಾರತ ಸಂಕಲ್ಪ ಯಾತ್ರೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಈ ಹಿಂದೆ 3.50 ಲಕ್ಷ ಮನೆಗಳನ್ನು ನಿರ್ಮಾಣ ಮಾಡಲಾಗಿದೆ. ಆದರೆ ಕಳೆದ 10 ವರ್ಷಗಳಲ್ಲಿ ಕೇಂದ್ರ ಸರ್ಕಾರ 4 ಕೋಟಿಗೂ ಅಧಿಕ ಕುಟುಂಬಗಳಿಗೆ ಶಾಶ್ವತ ಸೂರು ಕಲ್ಪಿಸಿದೆ. ಈ ಮೂಲಕ ಜನಪರ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ ಎಂದರು.

ಪ್ರಧಾನಮಂತ್ರಿ ಉಜ್ವಲ ಯೋಜನೆಯಡಿ ಬಡ ಕುಟುಂಬಗಳಿಗೆ ಉಚಿತ ಎಲ್.ಪಿ.ಜಿ ಸಂಪರ್ಕ ಕಲ್ಪಿಸಲಾಗಿದೆ. ಮುಂದಿನ ಮೂರು ವರ್ಷಗಳಲ್ಲಿ ಭಾರತ ವಿಶ್ವದ ಮೂರನೇ ದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಲಿದೆ ಎಂದ ಅವರು, ಭವಿಷ್ಯದಲ್ಲಿ ದೇಶದ ಕೃಷಿ ಕ್ಷೇತ್ರ ಸಂಪೂರ್ಣ ತಾಂತ್ರಿಕತೆಗಳ ಮೇಲೆ ನಡೆಯಲಿದೆ. ಇದರ ಭಾಗವಾಗಿ ಬೆಳೆಗಳಿಗೆ ಔಷಧಿ ಸಿಂಪರಣೆಗೆ 15 ಸಾವಿರ ಡ್ರೋಣ್‌ಗಳನ್ನು ದೇಶದ ಸ್ತ್ರೀ-ಶಕ್ತಿ ಸಂಘಗಳಿಗೆ ಶೇ.80 ರಷ್ಟು ಸಹಾಯಧನದೊಂದಿಗೆ ನೀಡಲಿದೆ. ಈ ಯೋಜನೆಗೆ (3ನೇ ಪುಟಕ್ಕೆ)


## ಮೂವರು ಹಿರಿಯ ಶಾಸಕರಿಗೆ ರಾಜ್ಯ ಸರ್ಕಾರದಲ್ಲಿ ಮಹತ್ವದ ಸ್ಥಾನ





ಬೆಂಗಳೂರು, ಡಿ. 29- ಶಾಸಕರ ಪತ್ರಗಳಿಗೆ ಸಚಿವರು ಕಿಮ್ಮತ್ತು ನೀಡುತ್ತಿಲ್ಲ ಎಂದು ಮುಖ್ಯ ಮಂತ್ರಿಗಳಿಗೆ ಪತ್ರ ಬರೆದು ಆಕ್ರೋಶ ವ್ಯಕ್ತಪಡಿಸಿದ್ದ ಹಿರಿಯ ಶಾಸಕರಿಗೆ ಇದೀಗ ಸಿಎಂ ಸಿದ್ದರಾಮಯ್ಯ ಮಹತ್ತರ ಹುದ್ದೆಗಳನ್ನು ನೀಡಿದ್ದಾರೆ.

ಹಿರಿಯ ಶಾಸಕರಾದ ಆರ್. ವಿ. ದೇಶಪಾಂಡೆ, ಬಸವರಾಜ ರಾಯರೆಡ್ಡಿ ಮತ್ತು ಬಿ.ಆರ್. ಪಾಟೀಲ್ ಅವರಿಗೆ ಸರ್ಕಾರದಲ್ಲಿ ಮಹತ್ವದ ಹುದ್ದೆಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡಿದ್ದಾರೆ. ಶುಕ್ರವಾರ ಈ ಕುರಿತು ಆದೇಶ ಹೊರಡಿಸಲಾಗಿದೆ. ಹಳಿಯಾಳ ಶಾಸಕ ಆರ್.ವಿ. ದೇಶಪಾಂಡೆ ಅವರನ್ನು ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರನ್ನಾಗಿ ನೇಮಕ (3ನೇ ಪುಟಕ್ಕೆ)



**ಶ್ಯಾಬನೂರಿನಲ್ಲಿ ಇಂದು ಶ್ರೀ ಆಂಜನೇಯ ಸ್ವಾಮಿ ಕಾರ್ತಿಕೋತ್ಸವ**

ಇಂದು ದಿನಾಂಕ 30.12.2023ರ ಶನಿವಾರ ಸಂಜೆ

ಸರ್ವ ಭಕ್ತಾದಿಗಳಿಗೆ ಆದರದ ಸುಸ್ವಾಗತ...

ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಕಮಿಟಿ, ಶ್ಯಾಬನೂರು.



## ಶಾಲೆ-ಆಸ್ಪತ್ರೆ ವೈಭವೀಕರಣದಿಂದ ಅಭಿವೃದ್ಧಿ

**ವಿಶ್ವ ಮಾನವ ದಿನಾಚರಣೆಯಲ್ಲಿ ಶಾಸಕ ಬಸವಂತಪ್ಪ**

ದಾವಣಗೆರೆ, ಡಿ. 29 - ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ರಾಷ್ಟ್ರಕವಿ ಕುವೆಂಪುರವರ ಚಿಂತನೆಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ವಿಶ್ವಮಾನವರಾಗಲು ಸಾಧ್ಯ ಎಂದು ಮಾಯಕೊಂಡ ಶಾಸಕ ಕೆ.ಎಸ್ ಬಸವಂತಪ್ಪ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಜರುಗಿದ ವಿಶ್ವ ಮಾನವ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಜನರು ವೈಚಾರಿಕವಾಗಿ ಯೋಚಿಸದೆ ಮೌಢ್ಯತೆ ಕಡೆಗೆ ವಾಲುತ್ತಿದ್ದಾರೆ. ನಮ್ಮ ದೇಶದಲ್ಲಿ ದೇವಸ್ಥಾನ, ಮಸೀದಿ, ಚರ್ಚ್‌ಗಳನ್ನು ವೈಭವೀಕರಿಸದೇ ಶಾಲಾ-ಕಾಲೇಜು ಹಾಗೂ ಆಸ್ಪತ್ರೆಗಳನ್ನು ವೈಭವೀಕರಿಸಿದಾಗ ಮಾತ್ರ ರಾಷ್ಟ್ರ ಅಭಿವೃದ್ಧಿ ಹೊಂದಲು ಸಾಧ್ಯ. ಕುವೆಂಪುರವರನ್ನು ಕೇವಲ ದಿನಾಚರಣೆಗೆ ಮಾತ್ರ ಸೀಮಿತಗೊಳಿಸದೇ ಅವರ ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಒಬ್ಬರು ಇನ್ನೊಬ್ಬರ ಮೇಲೆ ದ್ವೇಷ ಸಾಧಿಸುವುದರಿಂದ ವಿಶ್ವ ಮಾನವರಾಗಲು ಸಾಧ್ಯವಿಲ್ಲ. (3ನೇ ಪುಟಕ್ಕೆ)

**ಪ್ರಥಮ ವರ್ಷದ ಪುಣ್ಯಸ್ಮರಣೆ**



ದೇಹದಾನಿ

ದಿ|| ಶ್ರೀಮತಿ ಶೈಲಜಾ ಬಂದೋಜಿ (ಪಾರ್ವತಿ)

(ಜನನ : 01.06.1957, ಮರಣ : 30.12.2022)

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು,
ನೀವು ಹೇಳಿಕೊಟ್ಟ ಆದರ್ಶಗಳು, ನಡೆ-ನುಡಿಗಳು, ನಯ-ವಿನಯಗಳೇ
ನಮ್ಮ ಜೀವನದ ದಾರಿ ದೀಪವಾಗಿವೆ. ನಮ್ಮೆಲ್ಲರ ಬದುಕಿಗೆ ನಿಮ್ಮ
ಆದರ್ಶ ಮತ್ತು ಆಶೀರ್ವಾದ ಶಾಶ್ವತವಾಗಿ ನಮ್ಮ ಮೇಲಿರಲಿ.

ಇಂತಿ ದುಃಖತಪ್ತರು :
ಪತಿ : ಶ್ರೀ ಬಿ.ಜಿ. ಬಂದೋಜಿ
ಮಕ್ಕಳಾದ : ಶ್ರೀ ಶಿವಕುಮಾರ, ಶ್ರೀ ಅರುಣ್ ಕುಮಾರ್
ಶ್ರೀಮತಿ ತೇಜಶ್ರೀ ಬಿ., ಸೊಸೆಯಂದಿರು, ಅಳಿಯಂದಿರು
ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.
ಮೊ : 9886640802, 9845332104, 9986007516, 9741715484

## ಚಿತ್ರದುರ್ಗದ ಪಾಳು ಮನೆಯಲ್ಲಿ ಐವರ ಅಸ್ಥಿಪಂಜರ ಪತ್ತೆ

**ನಿವೃತ್ತ ಇಂಜಿನಿಯರ್, ಪತ್ನಿ ಹಾಗೂ ಮೂವರು ಮಕ್ಕಳ ನಿಗೂಢ ಸಾವು**

ಚಿತ್ರದುರ್ಗ, ಡಿ. 29 – ಇಲ್ಲಿನ ಚಳ್ಳಕೆರೆ ಗೇಟ್ ಬಳಿ ಪಾಳು ಬಿದ್ದ ಮನೆಯೊಂದರಲ್ಲಿ ಒಂದೇ ಕುಟುಂಬದ ಐವರ ಅಸ್ಥಿಪಂಜರದ ಅವಶೇಷಗಳು ಪತ್ತೆಯಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಇಲ್ಲಿ ಪತ್ತೆಯಾಗಿರುವುದು ನಿವೃತ್ತ ಸರ್ಕಾರಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಜಗನ್ನಾಥ್ ರೆಡ್ಡಿ (85), ಪತ್ನಿ ಪ್ರೇಮ (80), ಮಗಳು ತ್ರಿವೇಣಿ (62), ಗಂಡು ಮಕ್ಕಳಾದ ಕೃಷ್ಣ (60) ಹಾಗೂ ನರೇಂದ್ರ (57) ಅವರ ಅಸ್ಥಿಪಂಜರಗಳು ಎಂದು ಶಂಕಿಸಲಾಗಿದೆ.

ಮೂವರು ಮಕ್ಕಳಿಗೂ ಮದುವೆಯಾಗಿರಲಿಲ್ಲ. ಇವರು ಯಾವ ಸಂಬಂಧಿಗಳ ಮನೆಗೂ ಹೋಗುತ್ತಿರಲಿಲ್ಲ, ಸಂಬಂಧಿಗಳೂ ಇವರ ಮನೆಗೆ ಬರುತ್ತಿರಲಿಲ್ಲ ಎನ್ನಲಾಗಿದೆ. ವಿಧಿ ವಿಜ್ಞಾನ ಪರೀಕ್ಷೆ ನಂತರವೇ ಗುರುತು ಹಾಗೂ ಸಾವಿಗೆ ಕಾರಣ ಏನೆಂಬುದು ಖಚಿತವಾಗಲಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಧರ್ಮೇಂದ್ರ ಕುಮಾರ್ ಮೀನಾ ತಿಳಿಸಿದ್ದಾರೆ.

ಕುಟುಂಬದ ಸದಸ್ಯರು ಬೇರೆಯವರೊಂದಿಗೆ ಬೆರೆಯದೇ ಪ್ರತ್ಯೇಕವಾಗಿದ್ದರು ಹಾಗೂ ತೀವ್ರ ಆರೋಗ್ಯ ಸಮಸ್ಯೆ (4ನೇ ಪುಟಕ್ಕೆ)

|| ಶ್ರೀ ಬಸವೇಶ್ವರ ಪ್ರಸನ್ನ ||

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ಶ್ರೀ ಕಬೇದರ್ ಮಲ್ಲೇಶಪ್ಪನವರು
ರೈತ ಸಂಘದ ಜಿಲ್ಲಾ ಖಜಾಂಚಿ

ದಾವಣಗೆರೆ ತಾಲ್ಲೂಕು, ಹಳೇಚಿಕ್ಕನಹಳ್ಳಿ ಗ್ರಾಮದ ವಾಸಿ
**ಕಬೇದರ್ ಶ್ರೀಮತಿ ಉಷಾದೇವಿ ಮತ್ತು ಮಕ್ಕಳು** ಮಾಡುವ ವಿಜ್ಞಾಪನೆಗಳು.
ದಿನಾಂಕ 23.12.2023ನೇ ಶನಿವಾರ ಬೆಳಿಗ್ಗೆ 7.30ಕ್ಕೆ
ನನ್ನ ಪೂಜ್ಯ ಪತಿಯವರಾದ

**ಶ್ರೀ ಕಬೇದರ್ ಮಲ್ಲೇಶಪ್ಪನವರು**
ರೈತ ಸಂಘದ ಜಿಲ್ಲಾ ಖಜಾಂಚಿ

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆ**ಯನ್ನು
ದಿನಾಂಕ 31.12.2023ನೇ ಭಾನುವಾರ ಬೆಳಿಗ್ಗೆ 10.30ಕ್ಕೆ ಹಳೇಚಿಕ್ಕನಹಳ್ಳಿ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖ ತಪ್ತರು : ಶ್ರೀಮತಿ ಉಷಾದೇವಿ
ಶ್ರೀಮತಿ ಅಂಬುಜಾ ಮತ್ತು ಕೆ.ಎಂ. ಮಹಂತೇಶ್ ಮತ್ತು ಮಕ್ಕಳು, ಮೊಮ್ಮಕ್ಕಳು.
ಶ್ರೀಮತಿ ವೀಣಾ ಮತ್ತು ಮರುಳಸಿದ್ದಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು.
ಹಳೇಚಿಕ್ಕನಹಳ್ಳಿ ಮತ್ತು ಹೊಸಚಿಕ್ಕನಹಳ್ಳಿ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.
ಮೊ : 97411 54181, 99028 49250

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ತಪ್ಪದೇ ಆಗಮಿಸಬೇಕಾಗಿ ವಿನಂತಿ.

# ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆಯಿಂದ ದುಶ್ಚಟ ನಿವಾರಣೆಗೆ ಹಲವು ಕ್ರಮಗಳು

ದಾವಣಗೆರೆ, ಡಿ. 29- ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವಿಭಾಗದ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆಯು ಜನರನ್ನು ವ್ಯಸನಮುಕ್ತರನ್ನಾಗಿ ಮಾಡಲು ನಿರಂತರವಾಗಿ ಶ್ರಮಿಸುತ್ತಿದೆ ಎಂದು ವೇದಿಕೆಯ ಸಂಸ್ಥಾಪಕ ಅಧ್ಯಕ್ಷ ಹೊಸಕೆರೆ ಸುರೇಶ್ ಹೇಳಿದರು.

ಯುವಜನತೆ ಮದ್ಯಪಾನದಂತಹ ಪಿಡುಗಿಗೆ ದಾಸರಾಗುತ್ತಿದ್ದು, ಸಮಾಜದ ಅಭಿವೃದ್ಧಿಯ ವೇಗ ಕುಂಠಿತವಾಗುತ್ತಿರುವುದನ್ನು ಮನಗಂಡು ಡಾ.ಡಿ. ವೀರೇಂದ್ರ ಹೆಗ್ಗಡೆಯವರು 1991ರಲ್ಲಿ ಜನಜಾಗೃತಿ ವೇದಿಕೆ ಹುಟ್ಟು ಹಾಕಿದ್ದರು.

ಅಲ್ಲಿಂದ ನಿರಂತರವಾಗಿ ಶಾಲಾ ಮಕ್ಕಳಿಂದ ಹಿಡಿದು ಹಿರಿಯ ನಾಗರಿಕರವರೆಗೆ ಅರಿವು ಮೂಡಿಸುವ ಕಾರ್ಯವನ್ನು ವೇದಿಕೆ ಮಾಡುತ್ತಿದೆ ಎಂದು ಹೇಳಿದರು.

ವೇದಿಕೆ ಮೂಲಕ ಮದ್ಯವರ್ಜನೆ ಶಿಬಿರ, ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ, ಮನೆ ಭೇಟಿ ಮತ್ತು ಕೌನ್ಸಿಲಿಂಗ್ ಹಾಗೂ ಅರಿವು ಮೂಡಿಸುವ ಕಾರ್ಯಗಳನ್ನು ನಡೆಸಲಾಗುತ್ತಿದೆ ಎಂದು ಹೇಳಿದರು.

ಹೊಸ ಕ್ಯಾಲೆಂಡರ್ ವರ್ಷದ ಆರಂಭದಲ್ಲಿ ಸಂಭ್ರಮಿಸಲು ಮದ್ಯಪಾನ ಮಾಡುತ್ತಾರೆ. ಬೇರೆಲ್ಲಾ ದಿನಗಳಿಗಿಂತ ಈ ದಿನಗಳಲ್ಲಿ ಹೆಚ್ಚು ಅಪಘಾತಗಳಾಗುತ್ತಿವೆ. ಈ ಹಿನ್ನೆಲೆಯಲ್ಲಿ ಡಿಸೆಂಬರ್ 28ರಿಂದ ಜನವರಿ 3ರವರೆಗೆ ಮದ್ಯದಂಗಡಿಗಳನ್ನು ಬಂದ್ ಮಾಡುವಂತೆ ಜಿಲ್ಲಾಧಿಕಾರಿಗಳು ಹಾಗೂ ತಹಶೀಲ್ದಾರ್ ಗಳಿಗೆ ಮನವಿ ಸಲ್ಲಿಸಲಾಗುವುದು ಎಂದು ಹೇಳಿದರು. ಮುಖ್ಯಮಂತ್ರಿಗಳು ರಾಜ್ಯವನ್ನು ಮದ್ಯ ಮಾರಾಟ ಮುಕ್ತ ಮಾಡಬೇಕು ಎಂದು ಮನವಿ ಮಾಡಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ದಾವಣಗೆರೆಯಲ್ಲಿ ಕಳೆದ 11 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದು, ಜನರ ಪರಿವರ್ತನೆಯಲ್ಲಿ ವಿಶೇಷ ಕೊಡುಗೆ ನೀಡುತ್ತಿದೆ ಎಂದು ಟ್ರಸ್ಟ್‌ನ ಜಿಲ್ಲಾ ನಿರ್ದೇಶಕ ಎಂ.ಲಕ್ಷ್ಮಣ್ ಹೇಳಿದರು.

ಜಿಲ್ಲಾ ವ್ಯಾಪ್ತಿಯಲ್ಲಿ 885 ಕಾರ್ಯಕರ್ತರು ವಿವಿಧ ಹುದ್ದೆಗಳ ಮೂಲಕ ಜನರ ಮನೆ ಬಾಗಿಲಿಗೆ ತೆರಳಿ ಸಮಸ್ಯೆಗಳಿಗೆ ಸ್ಪಂದಿಸಿ ಪ್ರಗತಿಗೆ ಸಹಕರಿಸುತ್ತಿದ್ದಾರೆ. ಇದುವರೆಗೆ 18756 ಸ್ವ ಸಹಾಯ ಸಂಘಗಳನ್ನು ರಚನೆ ಮಾಡಲಾಗಿದ್ದು, 162548 ಸದಸ್ಯರು 132.67 ಕೋಟಿ ರೂ. ಉಳಿತಾಯ ಮಾಡಿದ್ದಾರೆ ಎಂದು ಮಾಹಿತಿ ನೀಡಿದರು.

ಮನೆ ಬಾಗಿಲಿಗೆ ಬ್ಯಾಂಕಿಗ್ ವ್ಯವಸ್ಥೆ, ಮಹಿಳಾ ಸ್ವಾವಲಂಬನೆಗಾಗಿ ಹಲವು ಕಾರ್ಯಕ್ರಮಗಳು, ಕೃಷಿ ಅಭಿವೃದ್ಧಿ, ನಮ್ಮೂರು ನಮ್ಮ ಕೆರೆ (ಕೆರೆ ಹೂಳೆತ್ತುವ ಯೋಜನೆ), ಶುದ್ಧ ಗಂಗಾ ಕಾರ್ಯಕ್ರಮ, ವಿಮಾ ಸೌಲಭ್ಯ ಯೋಜನೆ, ಹಸಿರು ಇಂಧನ ಕಾರ್ಯಕ್ರಮ, ಮಾಸಾಶನ ಮತ್ತು ಸುಜ್ಞಾನ ನಿಧಿ ಶಿಷ್ಯವೇತನ ಕಾರ್ಯಕ್ರಮ, ವಾತ್ಸಲ್ಯ ಕಾರ್ಯಕ್ರಮ, ಶ್ರದ್ಧಾ ಕೇಂದ್ರಗಳ ಶುಚಿತ್ವ ಅಭಿಯಾನ, ರೈತ ಸೇವಾ ಕೇಂದ್ರ, ಸಾಮಾನ್ಯ ಸೇವಾ ಕೇಂದ್ರಗಳ ಮೂಲಕ ಜನತೆಗೆ ಅನುಕೂಲ ಮಾಡಿಕೊಡಲಾಗುತ್ತಿದೆ ಎಂದು ವಿವರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ದಾವಣಗೆರೆ ತಾಲ್ಲೂಕು ಯೋಜನಾಧಿಕಾರಿ ಶ್ರೀನಿವಾಸ್, ವೇದಿಕೆಯ ಅಧ್ಯಕ್ಷ ಹೊನ್ನಾಳಿ ಬಾಬಣ್ಣ, ನಿಕಟಪೂರ್ವ ಅಧ್ಯಕ್ಷ ರಾಜಶೇಖರ್ ಕೊಂಡಜ್ಜಿ, ಸದಸ್ಯರುಗಳಾದ ಗೌಡ್ರು ಚನ್ನಬಸಪ್ಪ, ಕುಸುಮ ಶ್ರೇಷ್ಠಿ, ಜಿಗಳಿ ಪ್ರಕಾಶ್, ಚೇತನಾ ಶಿವಕುಮಾರ್, ಮಹಾಂತೇಶ್ ಜಿ.ಹೆಚ್., ಅಣಬೇರು ಮಂಜಣ್ಣ, ವಿರೂಪಾಕ್ಷಪ್ಪ, ಸಿದ್ದಯ್ಯ, ಶುಭ, ನಾಗರಾಜ ಕತ್ತಿಗೆ, ಮಂಜುನಾಥ ಸರಳಿಮನೆ, ಬಿ.ಎಲ್. ಕುಮಾರ ಸ್ವಾಮಿ, ಲಿಂಗರಾಜು, ಮಂಜುನಾಥ್, ಯೋಗೇಶ್ ಜಿ.ಬಿ. ಉಪಸ್ಥಿತರಿದ್ದರು.

# ಸ್ಮಶಾನದ ಜಾಗ ತೆರವುಗೊಳಿಸಿದ ತಹಶೀಲ್ದಾರ್




ಹೊನ್ನಾಳಿ, ಡಿ.29- ತಾಲ್ಲೂಕಿನ ಯಕ್ಕನಹಳ್ಳಿ ಗ್ರಾ.ಪಂ. ವ್ಯಾಪ್ತಿಯ ಚಿಕ್ಕಹಾಲಿವಾಣ ಗ್ರಾಮದಲ್ಲಿ ಸ್ಮಶಾನವಿಲ್ಲದೇ ಸತ್ತವರ ಶವ ಸಂಸ್ಕಾರ ಮಾಡಲು ಜಾಗದ ಸಮಸ್ಯೆ ತಲೆದೋರಿತ್ತು.

ಸರ್ವೇ ನಂಬರ್ 40ರಲ್ಲಿ 8 ಎಕರೆ 6 ಗುಂಟೆ ವಿಸ್ತೀರ್ಣದ ಸರ್ಕಾರಿ ಜಾಗದಲ್ಲಿ ಸ್ಮಶಾನಕ್ಕೆಂದು ಜಾಗ ಮೀಸಲಿಡಲಾಗಿದ್ದರೂ ಕೆಲವರು ಸ್ಮಶಾನಕ್ಕೆಂದು ಮೀಸಲಿರಿಸಿದ್ದ ಜಾಗವನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿದ್ದರು. ಕಳೆದ 15 ವರ್ಷ ಗಳಿಂದ ಗ್ರಾಮದಲ್ಲಿ ಮೃತರನ್ನು ಹೂಳಲು ಜಾಗದ ಸಮಸ್ಯೆ ತಲೆದೋರಿ ಹಿಂದಿನಿಂದಲೂ ಚುನಾಯಿತ ಜನಪ್ರತಿನಿಧಿಗಳಿಗೆ ಮತ್ತು ಅಧಿಕಾರಿ ವರ್ಗದವರಿಗೆ ಗ್ರಾಮಸ್ಥರು ಸ್ಮಶಾನದ ಜಾಗವನ್ನು ತೆರವುಗೊಳಿಸಲು ಹಲವಾರು ಬಾರಿ ಮನವಿ ಸಲ್ಲಿಸಿದ್ದರೂ ಪ್ರಯೋಜನವಾಗಿರಲಿಲ್ಲ.

ಚಿಕ್ಕಹಾಲಿವಾಣ ಗ್ರಾಮದಲ್ಲಿ ಹಿಂದಿನ 4 ತಹಶೀಲ್ದಾರ್‌ಗಳು ಒತ್ತುವರಿ ಜಾಗವನ್ನು ತೆರವುಗೊಳಿಸಲು ಪ್ರಯತ್ನಪಟ್ಟರೂ ಸ್ಮಶಾನಕ್ಕೆಂದು ಮೀಸಲಿರಿಸಿದ್ದ ಜಾಗವನ್ನು ತೆರವುಗೊಳಿಸಲಾಗಿರಲಿಲ್ಲ.

ತಹಶೀಲ್ದಾರ್ ಪಟ್ಟರಾಜೇಗೌಡ ಪತ್ರಿಕೆಗೆ ಮಾಹಿತಿ ನೀಡಿ, ಕಳೆದ 2 ವರ್ಷಗಳ ಹಿಂದೆ ಗ್ರಾಮದಲ್ಲಿ ಮೃತ ವ್ಯಕ್ತಿಯನ್ನು ಹೂಳಲು ಜಾಗವಿಲ್ಲದ್ದಕ್ಕೆ ಮೃತ ವ್ಯಕ್ತಿಯ ಕುಟುಂಬದವರು ಯಕ್ಕನಹಳ್ಳಿ ಗ್ರಾ.ಪಂ. ಎದುರು ಶವವನ್ನಿಟ್ಟು ಪ್ರತಿಭಟನೆ ನಡೆಸಿದ್ದರು ಎಂದು ಮಾಹಿತಿ ಲಭ್ಯವಾಗಿದ್ದು, ತಾವು ಆದ್ಯತೆಯ ಮೇರೆಗೆ ಯಾವ ಯಾವ ಗ್ರಾಮಗಳಲ್ಲಿ ಸ್ಮಶಾನದ ಸಮಸ್ಯೆ ಗಂಭೀರವಾಗಿದೆಯೋ ಆಯಾ ಗ್ರಾಮಗಳಲ್ಲಿ ಸ್ಮಶಾನ ತೆರವು ಕಾರ್ಯಾಚರಣೆ ಮಾಡುತ್ತಿರುವುದಾಗಿ ತಿಳಿಸಿದರು.

ಚಿಕ್ಕಹಾಲಿವಾಣ ಗ್ರಾಮದ ಸ್ಮಶಾನದ ಜಾಗದ ಸಮಸ್ಯೆಯನ್ನು ಗುರುವಾರ ತಡರಾತ್ರಿ ತಾ.ಪಂ. ಇಒ ಹೆಚ್.ವಿ.ರಾಘವೇಂದ್ರ ಮತ್ತು ಅವರ ತಂಡ ಹಾಗೂ ಕಂದಾಯ ಮತ್ತು ಸರ್ವೆ, ಪೊಲೀಸ್ ಬಂದೋಬಸ್ತ್‌ನಲ್ಲಿ ಗ್ರಾಮದವರ ಜೊತೆಗೆ ಚರ್ಚೆ ನಡೆಸಲಾಯಿತು.

ಪ್ರಾರಂಭದಲ್ಲಿ ಸ್ಮಶಾನದ ಜಾಗ ತೆರವು ಕಾರ್ಯಾಚರಣೆಗೆ ಕೆಲ ಗ್ರಾಮಸ್ಥರಿಂದ ಅಡ್ಡಿಪಡಿಸಲಾಯಿತು. ನಂತರ ಒತ್ತುವರಿ ಮಾಡಿದ್ದವರಿಗೆ ತಾಂತ್ರಿಕ ಸಮಸ್ಯೆಗಳ ಬಗ್ಗೆ ಮತ್ತು ಜಾಗ ಬಿಟ್ಟುಕೊಡುವ ವಿಚಾರವಾಗಿ ಸಮರ್ಪಕ ದಾಖಲೆಗಳನ್ನು ತೋರಿಸಿ ಮನವೊಲಿಸಲಾಯಿತು.

ರಾತ್ರಿ 8.30ರ ಸುಮಾರಿಗೆ ಜೆಸಿಬಿ ಯಂತ್ರದ ಮೂಲಕ ಸ್ಮಶಾನದ ಜಾಗವನ್ನು ತೆರವುಗೊಳಿಸಿ, ಒತ್ತುವರಿಯಾಗಿದ್ದ ಜಾಗವನ್ನು ಟ್ರೆಂಚ್ ಹೊಡೆಸಿ, ಎಕ್ಕನಹಳ್ಳಿ ಗ್ರಾ.ಪಂ.ಯವರಿಗೆ ಹಸ್ತಾಂತರಿಸಲಾಯಿತು ಎಂದು ವಿವರಿಸಿದರು.

ಈ ಸಂದರ್ಭದಲ್ಲಿ ತಾ.ಪಂ. ಇಒ ಹೆಚ್.ವಿ.ರಾಘವೇಂದ್ರ, ರಾಜಸ್ವ ನಿರೀಕ್ಷಕ ರಮೇಶ್, ಪಿಡಿಓ ಕರಿಯಪ್ಪ, ಕಾರ್ಯದರ್ಶಿ ರಾಜಪ್ಪ ಬನ್ನಿಕೊಡು, ಸರ್ವೇಯರ್ ರಮೇಶ್, ಗ್ರಾಮ ಆಡಳಿತಾಧಿಕಾರಿಗಳಾದ ಅನ್ನಪೂರ್ಣ, ಅನಿತಾ, ಪ್ರಶಾಂತ್, ಪೊಲೀಸ್ ಪೇದೆ ರಾಜು, ಗ್ರಾ.ಪಂ ಸಿಬ್ಬಂದಿ, ಸಾಸ್ವೆಹಳ್ಳಿ-2 ಹೋಬಳಿ ವ್ಯಾಪ್ತಿಯ ಗ್ರಾಮ ಸಹಾಯಕರುಗಳು ಉಪಸ್ಥಿತರಿದ್ದರು.

## ಕೊಕ್ಕನೂರಿನಲ್ಲಿಂದು ಹನುಮಪ್ಪನ ಕಾರ್ತಿಕೋತ್ಸವ




ಮಲೇಬೆನ್ನೂರು ಸಮೀಪದ ಶ್ರೀಕ್ಷೇತ್ರ ಕೊಕ್ಕನೂರು ಗ್ರಾಮದ ಆರಾಧ್ಯ ದೈವ ಶ್ರೀ ಆಂಜನೇಯ ಸ್ವಾಮಿಯ ಕಡೇ ಕಾರ್ತಿಕೋತ್ಸವ ಮತ್ತು ಅಶ್ವೋತ್ಸವವು ಇಂದು ಸಂಜೆ ಜರುಗಲಿದೆ.

## ಶ್ಯಾಬನೂರಿನಲ್ಲಿಂದು ಕಾರ್ತಿಕ



ದಾವಣಗೆರೆ - ಶ್ಯಾಬನೂರಿನ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಇಂದು ಸಂಜೆ ಕಾರ್ತಿಕ ದೀಪೋತ್ಸವ ನಡೆಯಲಿದೆ.

## ಶ್ರೀ ಗುರು ಗದ್ದಿಗೇಶ್ವರ ಸ್ವಾಮಿ ರಥೋತ್ಸವ



ಹೊನ್ನಾಳಿ

ಹೊನ್ನಾಳಿ, ಡಿ. 29 - ಕೂಲಂಬಿ ಗ್ರಾಮದ ಶ್ರೀ ಗುರು ಗದ್ದಿಗೇಶ್ವರ ಸ್ವಾಮಿ ರಥೋತ್ಸವವು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ರಥೋತ್ಸವದ ಪ್ರಯುಕ್ತ ಶ್ರೀ ಗುರು ಗದ್ದಿಗೇಶ್ವರ ಸ್ವಾಮಿ ಸನ್ನಿಧಿಯಲ್ಲಿ ಸಾಮೂಹಿಕ ವಿವಾಹ ಸಮಾರಂಭ ನಡೆಯಿತು. 45 ಜೊತೆ ಮದುವೆಗಳು ನಡೆದವು. ರಾತ್ರಿ ಅಡ್ಡ ಪಲ್ಲಕ್ಕಿ ಉತ್ಸವ ನಡೆಯಿತು.

ಶ್ರೀಗುರು ಗದ್ದಿಗೇಶ್ವರ ಸ್ವಾಮಿ ಕಾರ್ತಿಕೋತ್ಸವದ ಪ್ರಯುಕ್ತ ಮಂಗಳವಾರ ಶ್ರೀ ಬಸವೇಶ್ವರ ಸ್ವಾಮಿ, ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಿಂದ ದೀಪ ರಥೋತ್ಸವ ಕಾರ್ಯಕ್ರಮ ವೈಭವದಿಂದ ನಡೆಯಿತು. ಶ್ರೀ ಗುರು ಗದ್ದಿಗೇಶ್ವರ ಸ್ವಾಮಿಯನ್ನು ಕೈಲಾಸ ಸಭಾ ಮಂಟಪಕ್ಕೆ ತಂದು ಪೀಠಾರೋಹಣ ಮಾಡಲಾಯಿತು.

## ಹಳೇಬಾತಿ ದರ್ಗಾಕ್ಕೆ ಎಸ್ಸೆಸ್ ಭೇಟಿ



ದಾವಣಗೆರೆ, ಡಿ.29- ಹಳೇಬಾತಿಯಲ್ಲಿರುವ ಹಜರತ್ ಸೈಯದ್ ಚಮನ್ ಷಾವಲಿ ಬಾಬಾರವರ ಸಂದಲ್ ಮೊನ್ನೆ ವಿಜೃಂಭಣೆಯಿಂದ ಜರುಗಿತು.

ಶಾಸಕ ಶಾಮನೂರು ಶಿವಶಂಕರಪ್ಪ ಅವರು ದರ್ಗಾಕ್ಕೆ ಭೇಟಿ ನೀಡಿ, ಗಲೀಫಿ ಗಂಧ ಅರ್ಪಿಸಿ ಫಾತೇಹಾ ಖ್ವಾನಿಯಲ್ಲಿ ಪಾಲ್ಗೊಂಡು ಸಂದಲ್ ಆಚರಣೆಗೆ ಚಾಲನೆ ನೀಡಿದರು.

ಗೌರವ ಅಧ್ಯಕ್ಷ ಕೆ.ಜಿ. ಉಮೇಶ್, ಅಧ್ಯಕ್ಷ ದಾಸರ ವೆಂಕಟೇಶ್. ಸಿ.ಎನ್. ರಾಜು, ಪಿ. ಬಸವರಾಜ, ಎಂ.ಎನ್.ಆಂಜನೇಯ, ವೀರಣ್ಣ, ಶಿವಕುಮಾರ್, ಅಯೂಬ್ ಪೈಲ್ವಾನ್, ಬಿ.ಪಿ. ಸುಭಾಸ್, ಗೌಡ್ರ ಪರಮೇಶ್ವರಪ್ಪ, ಗುರು ಪಾಟೀಲ್, ಪತ್ರಕರ್ತ ಬಿ. ಸಿಕಂದರ್, ಕುರುಡಿ ಗಿರೀಶ್ ಸೇರಿದಂತೆ ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

# ಒಂದೇ ತಾಲ್ಲೂಕಿನಲ್ಲಿ 4 ವಿಭಾಗದ ಕುಸ್ತಿ ಪಂದ್ಯ : ಹರಿಹರದ ಹೆಗ್ಗಳಿಕೆ




ಹರಿಹರ, ಡಿ,29- ನಾಡಿನ ಇತಿಹಾಸದಲ್ಲಿ ನಾಲ್ಕು ವಿಭಾಗದ ಕುಸ್ತಿಯನ್ನು ಒಂದೇ ತಾಲ್ಲೂಕಿನಲ್ಲಿ ನಡೆಸಿರುವ ಹೆಗ್ಗಳಿಕೆ ಹರಿಹರ ನಗರಕ್ಕೆ ಸಲ್ಲುತ್ತದೆ ಎಂದು ಕುಸ್ತಿ ಜೀರ್ಣೋದ್ಧಾರ ಸಮಿತಿಯ ಗೌರವ ಅಧ್ಯಕ್ಷ ನಂದಿಗಾವಿ ಶ್ರೀನಿವಾಸ್ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ನಗರದಲ್ಲಿ ಐದು ದಿನಗಳ ಕಾಲ ನಡೆದ ಹೊನಲು ಬೆಳಕಿನ ಕುಸ್ತಿ ಪಂದ್ಯಾವಳಿಯಲ್ಲಿ ನಾಲ್ಕು ವಿಭಾಗದಲ್ಲಿ ಕುಸ್ತಿ ನಡೆಸಲಾಗಿದ್ದು, ಅದರಲ್ಲಿ 15, 18, 20 ಮತ್ತು ಹಿರಿಯರ ವಯೋಮಿತಿಯಲ್ಲಿ ಕುಸ್ತಿ ಪಂದ್ಯಗಳು ನಡೆದಿವೆ.

ಕುಸ್ತಿಯಲ್ಲಿ 120 ಕುಸ್ತಿ ಪಟುಗಳು ರಾಷ್ಟ್ರೀಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. 15 ವಯೋಮಿತಿಯ 30, 18 ವಯೋಮಿತಿಯ 30, 20 ವಯೋಮಿತಿಯ 30 ಮತ್ತು ಸೀನಿಯರ್ ವಿಭಾಗದಲ್ಲಿ 30 ಕುಸ್ತಿ ಪಟುಗಳು ಆಯ್ಕೆಯಾಗಿದ್ದಾರೆ. 986 ಬಾಲಕ, ಬಾಲಕಿಯರು, ಹಿರಿಯರು 320 ಕುಸ್ತಿ ಪಟುಗಳು ಸೇರಿದಂತೆ ಒಟ್ಟು 1281 ಕುಸ್ತಿ ಪಟುಗಳು ಭಾಗವಹಿಸಿದ್ದು, ಜೊತೆಗೆ 21 ಭಾರತೀಯ ಸೇನೆ, 4 ರೈಲ್ವೆ, 18 ಪೊಲೀಸ್ ಇಲಾಖೆಯ ಕುಸ್ತಿ ಪಟುಗಳು ಭಾಗವಹಿಸಿದ್ದರು.

ಈ ಎಲ್ಲಾ ಕುಸ್ತಿ ಪಂದ್ಯಗಳು ಕಾಗಿನೆಲೆ ಗುರುಪೀಠದ ಜಗದ್ಗುರು ಶ್ರೀ ನಿರಂಜನಾನಂದಪುರಿ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ನಡೆದಿದ್ದು, ವಿಜೇತರಾದ ಕುಸ್ತಿ ಪಟುಗಳಿಗೆ ಶ್ರೀಗಳು ಬಹು ಮಾನ ವಿತರಣೆ ಮಾಡಿದರು ಎಂದು ಹೇಳಿದರು.

ರಾಜ್ಯ ಕುಸ್ತಿ ಮುಖ್ಯ ತರಬೇತುದಾರ ವಿನೋದ್ ಕುಮಾರ್ ಮಾತನಾಡಿ, ಕರ್ನಾಟಕ ಕಂಠೀರವ ಪ್ರಶಸ್ತಿಯನ್ನು ಮುಧೋಳದ ಪಾಂಡುರಂಗ ಶಿಂಧೆ, ಕರ್ನಾಟಕ ಕೇಸರಿ ಪ್ರಶಸ್ತಿಯನ್ನು ಸದಾಶಿವ ನಲವಾಡ, ಕರ್ನಾಟಕ ಕುಮಾರ್ ಪ್ರಶಸ್ತಿ ದಾವಣಗೆರೆ ಕೊರವರ ಸಂಜೀವ, ಬಾಲ ಕಂಠೀರವ ಪ್ರಶಸ್ತಿ ದಾವಣಗೆರೆ ಕೊರವರ ಅರ್ಜುನ, ಕರ್ನಾಟಕ ಶ್ರೀ ಪ್ರಶಸ್ತಿ ಭೀಮಾ ಕಾಟೆ, ಕನಕಶ್ರೀ ಪ್ರಶಸ್ತಿ ಹನುಮಂತ ಭೋವಿ, ಕರ್ನಾಟಕ ಬಾಲ ಕಿಶೋರ ಪ್ರಶಸ್ತಿ ಖಾಜಿ ಮೈನುದ್ದೀನ್ ಮಾಳಗೆ, ಶ್ರೀ ಮಹಿಳಾ ಕೇಸರಿ ಪ್ರಶಸ್ತಿ ಓಬವ್ವ ಕುಟಕಿ, ಕರ್ನಾಟಕ ಶ್ರೀಮತಿ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಸೋನಿಯಾ ಜಾಧವ್ ಗದಗ, ಶ್ರೀ ಒನಕೆ ಓಬವ್ವ ಪ್ರಶಸ್ತಿ ಪ್ರೀನ್ಸಿತ್ ಸಿದ್ದಿ ಹಳಿಹಾಳ, ಶ್ರೀ ಹರಿಹರೇಶ್ವರ ಪ್ರಶಸ್ತಿ ಮಂಜುನಾಥ್ ಗೌಡ ಬಾಗಲಕೋಟೆ, ದಿ. ಕಾವ್ಯಶ್ರೀ ಪ್ರಶಸ್ತಿ ಭಗವತಿ ಲಂಗೋಟಿ ಧಾರವಾಡ ಇವರುಗಳು ಕುಸ್ತಿ ಪ್ರಶಸ್ತಿಯನ್ನು ಪಡೆದಿದ್ದಾರೆ.

ಭಾರತೀಯ ಸೇನೆ, ಕುಸ್ತಿ ಪ್ರಾಧಿಕಾರದಿಂದ ಬಂದಂತಹ ಸುಮಾರು 35 ಕ್ಕೂ ಹೆಚ್ಚು ತರಬೇತುದಾರರು ಕುಸ್ತಿ ಪಂದ್ಯದಲ್ಲಿ ತೀರ್ಪುಗಾರರಾಗಿ ಸೇವೆ ಸಲ್ಲಿಸಿದ್ದಾರೆ. ದಾವಣಗೆರೆ ಜಿಲ್ಲೆಯಿಂದ 9 ಕುಸ್ತಿ ಪಟುಗಳು ಸ್ಪರ್ಧೆ ಮಾಡಿದ್ದು ಅದರಲ್ಲಿ 5 ಕುಸ್ತಿ ಪಟುಗಳು ರಾಷ್ಟ್ರೀಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಹರಿಹರ ನಗರದ ಶಿವಕುಮಾರ್ ಜೆ.ಸಿ. ಚೇತನ್ ದ್ವಿತೀಯ ಸ್ಥಾನವನ್ನು ಪಡೆದಿದ್ದಾರೆ. ಇಲ್ಲಿನ ಕುಸ್ತಿ ಪಂದ್ಯದಲ್ಲಿ ಭಾಗವಹಿಸಿದ 50 ಕ್ಕೂ ಹೆಚ್ಚು ಕುಸ್ತಿ ಪಟುಗಳಿಗೆ ಸರ್ಕಾರದ ವತಿಯಿಂದ 1 ಲಕ್ಷದವರೆಗೂ ಪ್ರೋತ್ಸಾಹ ಧನವನ್ನು ಸರ್ಕಾರ ನೀಡಲಿದೆ. ರಾಣೇಬೆನ್ನೂರು ನಗರದ ಕಾರ್ತಿಕ್ ಕಾಟೆ ಮತ್ತು ಪಂಜಾಬ್ ರಾಜ್ಯದ ಜಾಂಡಿ ಸಿಂಗ್ ನಡುವೆ ನಡೆದ ಕುಸ್ತಿ ಪಂದ್ಯದಲ್ಲಿ ರಾಣೇಬೆನ್ನೂರು ನಗರದ ಕಾರ್ತಿಕ್ ಕಾಟೆ ಜಯ ಗಳಿಸಿ ನೋಡುಗರ ಕಣ್ಮನ ಸೆಳೆದರು.

ಕುಸ್ತಿ ಪಂದ್ಯದಲ್ಲಿ ರಾಜ್ಯದ ಕುಸ್ತಿ ಸಂಘದ ಅಧ್ಯಕ್ಷ ಬಿ. ಗುಣರಂಜನ್ ಶೆಟ್ಟಿ, ಕಾರ್ಯದರ್ಶಿ ಜೆ. ಶ್ರೀನಿವಾಸ್, ಖಜಾಂಚಿ ಶ್ರೀನಿವಾಸ್, ಪ್ರಸಾದ್ ಶೆಟ್ಟಿ ಇತರರು ಭಾಗವಹಿಸಿ ಪಂದ್ಯಾವಳಿ ಯಶಸ್ವಿಯಾಗಿಸಿದರು ಎಂದು ಹೇಳಿದರು.

ಈ ಸಂದರ್ಭದಲ್ಲಿ ಹರಿಹರ ಕುಸ್ತಿ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ರೇವಣಪ್ಪ ದ್ಯಾವನಾಯ್ಕರ್, ಕಾರ್ಯದರ್ಶಿ ಚೂರಿ ಜಗದೀಶ್, ಶಿವಾನಂದ, ಹನುಮಂತಪ್ಪ, ಮಾರುತಿ ಪೂಜಾರ್ ಇತರರು ಹಾಜರಿದ್ದರು.

# ರಾಣೇಬೆನ್ನೂರಿಗೆ ಇಂದು ಸಚಿವ ಜಾರಕಿಹೊಳಿ



ಆರ್‌ಟಿಇಎಸ್ ಮಹಾವಿದ್ಯಾಲಯದಲ್ಲಿ ಇಂದು ನಡೆಯುವ ರಾಷ್ಟ್ರೀಯ ಬಹುಶಿಸ್ತೀಯ ಸಮ್ಮೇಳನದ ಮುಖ್ಯ ಅತಿಥಿಯಾಗಿ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ಶಾಸಕ ಪ್ರಕಾಶ ಕೋಳಿವಾಡ, ಕರ್ನಾಟಕ ವಿಶ್ವವಿದ್ಯಾಲಯದ ಸುಭಾಸಚಂದ್ರ ನಾಟಿಕಾರ, ಶಿಕ್ಷಕರ ಸಂಘದ ಅಧ್ಯಕ್ಷ ಮಂಜುನಾಥ ತಲ್ಲೂರ ಅವರುಗಳು ಭಾಗವಹಿಸುವರು. ಐದು ವಿದೇಶಿಯರ ಹಾಗೂ ವಿವಿಧ ರಾಜ್ಯದ ಕಾಲೇಜುಗಳ ಪ್ರಾಧ್ಯಾಪಕರು, ಸಂಶೋಧಕರು ಹಾಗೂ ವಿದ್ಯಾರ್ಥಿಗಳು ಸೇರಿದಂತೆ 2 ನೂರಕ್ಕೂ ಹೆಚ್ಚು ಪ್ರಬಂಧಗಳನ್ನು ಕಳಿಸಿದ್ದಾರೆ ಎಂದು ಪ್ರಾಚಾರ್ಯ ಸಿ.ಎ. ಹರಿಹರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಜೊತೆಯಲ್ಲಿ ಡಾ. ಮಧುಕುಮಾರ, ಡಾ.ಆನಂದ ಕಾನಪೇಟೆ, ಎನ್.ಎ. ಪ್ರವೀಣ ಇದ್ದರು.

# ಹರಿಹರ : ಭದ್ರಾ ನಾಳೆಗಳಲ್ಲಿ ನೀರು ಹರಿಸಲು ಒತ್ತಾಯ

ಹರಿಹರ,ಡಿ. 29 - ಭದ್ರಾ ಅಣೆಕಟ್ಟೆನಿಂದ ಭದ್ರಾ ಕಾಲುವೆಗಳಿಗೆ ನೀರು ಹರಿಸುವಂತೆ ಸರ್ಕಾರಕ್ಕೆ ಒತ್ತಾಯಪಡಿಸಲಾಗುತ್ತದೆ ಎಂದು ಆಮ್ ಆದ್ಮಿ ಪಕ್ಷದ ತಾಲ್ಲೂಕು ಅಧ್ಯಕ್ಷ ಜಿ.ಎಸ್. ಬಸವರಾಜ್ ಹಲಸಬಾಳು ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಕಳೆದ ಬಾರಿ ನಡೆದ ಕಾಡಾ ಸಭೆಯಲ್ಲಿ ತಾಲ್ಲೂಕಿನ ರೈತರಿಗೆ 110 ದಿನಗಳ ಕಾಲ ನೀರನ್ನು ಕೊಡಬೇಕು ಎಂದು ತೀರ್ಮಾನ ಆಗಿತ್ತು. ಆದರೆ 80 ದಿನಗಳು ಮಾತ್ರ ನೀರನ್ನು ಕೊಟ್ಟಿದ್ದಾರೆ. ಇದರಿಂದಾಗಿ ತಾಲ್ಲೂಕಿನ ರೈತರಿಗೆ ಬಹಳ ದೊಡ್ಡ ಪ್ರಮಾಣದಲ್ಲಿ ಅನ್ಯಾಯವಾಗಿದೆ. ಡ್ಯಾಮ್ ಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ನೀರು ಶೇಖರಣೆ ಇದ್ದರು, ಸಹಿತ ರೈತರು ಬೆಳೆದ ಬೆಳೆಗಳಿಗೆ ಸರ್ಕಾರ ಸಮರ್ಪಕವಾಗಿ ನೀರನ್ನು ಕೊಡದೆ ಇರೋದರಿಂದ ರೈತರ ಬದುಕು ದುಸ್ತರವಾಗಿದ್ದು ಮತ್ತು ಜಿಲ್ಲೆಯ ಭತ್ತ ಹಾಗೂ ಅಡಿಕೆ ಬೆಳೆಗಾರರು ತಮ್ಮ ಭೂಮಿಯನ್ನು ಉಳುಮೆ ಮಾಡಲು ನೀರಿನ ಕೊರತೆಯನ್ನು ಎದುರುಸುತ್ತಿರುವುದರಿಂದ ಭದ್ರಾ ಕಾಲುವೆ ಅಣೆಕಟ್ಟೆಯಿಂದ ನೀರನ್ನು ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಒತ್ತಾಯ ಮಾಡಲಾಗುತ್ತದೆ ಎಂದು ಹೇಳಿದರು.

ವಕೀಲ ಗಣೇಶ ದುರ್ಗಾದ ಮಾತನಾಡಿ ಭದ್ರಾ ಅಣೆಕಟ್ಟಿನಲ್ಲಿ 166 ಅಡಿ ನೀರಿನ ಪೈಕಿ, ನಮ್ಮ ಜಿಲ್ಲೆಯ ರೈತರ ಬಳಕೆಗಾಗಿ 16 ಅಡಿಗಳ ನೀರನ್ನು ಮಾತ್ರ ಬಿಡುಗಡೆ ಮಾಡಲಾಗಿದೆ. ಉಳಿದ 150 ಅಡಿ ನೀರು ಶೇಖರಣೆ ಇರುತ್ತದೆ. ಕನಿಷ್ಠ 100 ಅಡಿ ನೀರು ಸಂಗ್ರಹವಿರಬೇಕಾಗಿದ್ದು, 100 ಅಡಿ ಸಂಗ್ರಹವನ್ನು ಕಡಿತಗೊಳಿಸಿದ ನಂತರ 50 ಅಡಿ ನೀರಿನ ಸಂಗ್ರಹ ದಾವಣಗೆರೆ ಜಿಲ್ಲೆಯ ರೈತರಿಗೆ ಬೇಸಿಗೆಯಲ್ಲಿ ಭತ್ತ ಮತ್ತು ಅಡಿಕೆ ಬೆಳೆಯಲು ಮತ್ತು ಉಳುಮೆ ಮಾಡಲಿಕ್ಕೆ ಬಿಟ್ಟರೆ ಇನ್ನೂ ಸಾಕಷ್ಟು ನೀರು ಲಭ್ಯವಿರುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಆಮ್ ಆದ್ಮಿ ಪಕ್ಷದ ಜಿಲ್ಲಾ ಅಧ್ಯಕ್ಷ ಎಸ್.ಕೆ. ಶಿವರಾಮ್, ಕಾರ್ಯದರ್ಶಿ ಅರುಣ್ ಕುಮಾರ್, ತಾಲ್ಲೂಕು ಅಧ್ಯಕ್ಷ ಬಿ. ಮಲ್ಲೇಶ್, ಆದಿಲ್ ಖಾನ್, ಸೈಯದ್ ಸಾದತ್, ವೀರಭದ್ರಪ್ಪ ನಾಗೇನಹಳ್ಳಿ, ಸೀತಾರಾಮು, ಅಬ್ದುಲ್ ರೆಹಮಾನ್, ಮಹಮ್ಮದ್ ಯೂನುಸ್, ಇತರರು ಹಾಜರಿದ್ದರು.

# ಯಾವುದೇ ಸಮಸ್ಯೆ ಬಂದರೂ ಎದೆ ಗುಂದದೆ ಮೆಟ್ಟಿ ನಿಲ್ಲುವ ಅದಮ್ಯ ಚೇತನರು

### ವಿಶ್ವ ವಿಕಲಚೇತನರ ದಿನಾಚರಣೆಗೆಯಲ್ಲಿ ಹರಪನಹಳ್ಳಿ ಶಾಸಕರಾದ ಲತಾ



ಹರಪನಹಳ್ಳಿ, ಡಿ. 29 - ವಿಕಲ ಚೇತನರು ಶಕ್ತಿ ಶಾಲಿಗಳು ಯಾವುದೇ ಸಮಸ್ಯೆ ಬಂದರೂ ಎದೆ ಗುಂದದೆ ಮೆಟ್ಟಿ ನಿಲ್ಲುವ ಅದಮ್ಯ ಚೇತನರು ಎಂದು ಶಾಸಕರಾದ ಎಂ.ಪಿ. ಲತಾ ಮಲ್ಲಿಕಾರ್ಜುನ್ ಹೇಳಿದರು.

ಪಟ್ಟಣದ ತಾಲ್ಲೂಕು ಪಂಚಾಯ್ತಿ ಸಾಮರ್ಥ್ಯ ಸೌಧದಲ್ಲಿ ತಾಲ್ಲೂಕು ಆಡಳಿತ, ತಾ.ಪಂ, ಪುರಸಭೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಶಿಕ್ಷಣ ಇಲಾಖೆ ಹಾಗೂ ವಿಕಲ ಚೇತನರ ಸಂಘ-ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ವಿಶ್ವ ವಿಕಲ ಚೇತನರ ದಿನಾಚರಣೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ನನಗೆ ವಿಕಲ ಚೇತನರ ಬಗ್ಗೆ ವಿಶೇಷ ಕಾಳಜಿ ಇದ್ದು ನಿಮ್ಮ ಸಮಸ್ಯೆಗಳಿಗೆ ಸ್ಪಂದಿಸುತ್ತೇನೆ ಎಂದು ಶಾಸಕರು ಭರವಸೆ ನೀಡಿದರು.

ವಿಕಲ ಚೇತನರ ಜಿಲ್ಲಾ ಕಲ್ಯಾಣಾಧಿಕಾರಿ ಕೃಷ್ಣ ಸಾ. ಬಾಕಳೆ ಮಾತನಾಡಿ, ಹರಪನಹಳ್ಳಿ ತಾಲ್ಲೂಕಿನ ವಿಕಲಚೇತನರು ಇಲಾಖೆಯಿಂದ ಅನುಷ್ಠಾನಗೊಳ್ಳುವ ಯೋಜನೆಗಳನ್ನು ಸಮರ್ಪಕವಾಗಿ ಬಳಸಿಕೊಂಡು ಸ್ವಾವಲಂಬಿ ಜೀವನ ನಡೆಸುವ ಮೂಲಕ ಸಮಾಜಕ್ಕೆ ಮಾದರಿಯಾಗಬೇಕು ಎಂದರು.

ಈ ಸಂದರ್ಭದಲ್ಲಿ ಪುರಸಭೆ ಸದಸ್ಯ ಎಂ.ವಿ. ಅಂಜಿನಪ್ಪ, ಲಾಟಿ ದಾದಾಪೀರ್, ಉದ್ದಾರ ಗಣೇಶ, ಶಾಸಕರ ರಾಜಕೀಯ ಕಾರ್ಯದರ್ಶಿ ಪ್ರದೀಪ್, ಯೋಜನಾಧಿಕಾರಿ ನವೀನ್, ತಾ.ಪಂ. ಸಹಾಯಕ ನಿರ್ದೇಶಕ ವೀರಣ್ಣ ಲಕ್ಕಣ್ಣನವರ್, ವಿಕಲಚೇತನರ ನೋಡಲ್ ಅಧಿಕಾರಿ ರೇಣುಕಾ, ಎಂಆರ್‌ಡಬ್ಲ್ಯೂ ಆರ್. ಧನರಾಜ್ ಸೇರಿದಂತೆ ವಿಶೇಷ ಚೇತನರು ಇದ್ದರು.


**ಭಾವಸಾರ ಕ್ಷತ್ರಿಯ ಸಮಾಜದ ಮಾಜಿ ಕಾರ್ಯದರ್ಶಿ**

**ಅರುಣ್ ಗುಜ್ಜರ್‌ರವರಿಗೆ ಮಾತೃ ವಿಯೋಗ**



ದಾವಣಗೆರೆ ತಾಲ್ಲೂಕು ಕಕ್ಕರಗೊಳ್ಳ ಗ್ರಾಮದ ಆಂಜನೇಯ ಬಡಾವಣೆ, 15ನೇ ಕ್ರಾಸ್‌ನ ನಿವಾಸಿ ದಿ. ನರಸಿಂಗರಾವ್ ಗುಜ್ಜರ್ ಇವರ ಧರ್ಮಪತ್ನಿ

**ಶ್ರೀಮತಿ ಗಾಯತ್ರಿ**

ಇವರು, ದಿನಾಂಕ 29.12.2023ರ ಶುಕ್ರವಾರ ರಾತ್ರಿ 11.50ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 74 ವರ್ಷ ವಯಸ್ಸಾಗಿತ್ತು.

ಓರ್ವ ಪುತ್ರ, ಮೂವರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 30.12.2023ರ ಶನಿವಾರ 2ಕ್ಕೆ ನಗರದ ಪಿ.ಬಿ. ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ,**

**ಮೊ : 97427 22660, 98803 63262**


# ಕಾಂತರಾಜ ವರದಿ ಜಾರಿಗೆ ಆಗ್ರಹಿಸಿ ಅಹಿಂದ ಪ್ರತಿಭಟನೆ




ಹೊನ್ನಾಳಿ, ಡಿ.29- ಕಾಂತರಾಜ ವರದಿಯನ್ನು ಕೂಡಲೇ ಜಾರಿಗೊಳಿಸಬೇಕು ಎಂದು ರಾಜ್ಯ ಹಿಂದುಳಿದ ವರ್ಗಗಳ ರಾಜ್ಯ ಉಪಾಧ್ಯಕ್ಷ ಎಚ್. ಎ. ಉಮಾಪತಿ ಸರ್ಕಾರವನ್ನು ಒತ್ತಾಯಿಸಿದರು.

ಪಟ್ಟಣದ ವೀರ ಸಂಗೊಳ್ಳಿ ರಾಯಣ್ಣ ವೃತ್ತದಿಂದ ತಾಲ್ಲೂಕು ಕಚೇರಿವರೆಗೆ ಘೋಷಣೆಗಳನ್ನು ಕೂಗುತ್ತಾ, ಅಹಿಂದ ತಾಲ್ಲೂಕು ಘಟಕದ ವತಿಯಿಂದ ಪ್ರತಿಭಟನಾ ಮೆರವಣಿಗೆ ಮೂಲಕ ತೆರಳಿ ಉಪವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ ಅವರಿಗೆ ಮನವಿ ಸಲ್ಲಿಸಿ ಅವರು ಮಾತನಾಡಿದರು.

2014ರಲ್ಲಿ ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗವು ರಾಜ್ಯದಲ್ಲಿ ಕಾಂತರಾಜ ಅವರ ಅಧ್ಯಕ್ಷತೆಯಲ್ಲಿ ಸಮೀಕ್ಷೆಯನ್ನು ನಡೆಸಿದ್ದು, ಅದರಂತೆ ಆಯೋಗವು ಜಾತಿ ವರದಿಯನ್ನು ಸಿದ್ಧಪಡಿಸಿದ್ದು, ವಾಸ್ತವಿಕವಾಗಿ ವರದಿ ಎಲ್ಲ ಜನಾಂಗಗಳ ಆರ್ಥಿಕ ಸ್ಥಿತಿಗತಿಗಳ ಕುರಿತ ವರದಿಯಾಗಿದ್ದು, ಅದನ್ನು ಸರ್ಕಾರ ಇನ್ನೂ ಕೂಡ ಅಂಗೀಕರಿಸಿ ಜಾರಿಗೊಳಿಸಿಲ್ಲ. ವರದಿ ಏನು ಹೇಳುತ್ತಿದೆ ಎಂದು ಯಾರಿಗೂ ಸ್ಪಷ್ಟವಾಗಿ ತಿಳಿದಿಲ್ಲ, ಆಗಲೇ ಇತರೆ ಬಲಾಢ್ಯ ಸಮಾಜದವರು ಇದನ್ನು ವಿರೋಧಿಸುತ್ತಿದ್ದಾರೆ ಎಂದು ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಹೊನ್ನಾಳಿ ತಾಲ್ಲೂಕು ಅಹಿಂದ ಅಧ್ಯಕ್ಷ ಡಾ.ಈಶ್ವರ್ ನಾಯ್ಕ್ ಮಾತನಾಡಿ, ರಾಜ್ಯದ ಎಲ್ಲ ಜನಾಂಗದ ಹಿತವನ್ನು ಪರಿಗಣಿಸಿ ವೈಜ್ಞಾನಿಕವಾಗಿ ತಯಾರಿಸಲಾದ ವರದಿ ಇದಾಗಿದ್ದು, ಬೇಡವಾದವರಿಗೆ ಮೊಸರಲ್ಲಿ ಕಲ್ಲು ಎನ್ನುವಂತೆ ಕ್ಷುಲಕ ಕಾರಣಕ್ಕೆ ಈ ವರದಿಯನ್ನು ಅಲ್ಲಗಳೆಯುವುದು ಸರಿಯಲ್ಲ, ಸರ್ವ ಜನಾಂಗಗಳ ರಾಜಕೀಯ, ಶೈಕ್ಷಣಿಕ, ಸಾಮಾಜಿಕ ಹಾಗೂ ಆರ್ಥಿಕ ಸಮಾನತೆಗಾಗಿ ಈ ವರದಿ ಅಗತ್ಯವಾಗಿದ್ದು ಸರ್ಕಾರ ಇದನ್ನು ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ಅಂಜುನಾಯ್ಕ್, ಬಾಬು ಹೋಬಳದಾರ್, ಮಾರಿಕೊಪ್ಪದ ಚಿನ್ನಪ್ಪ, ರಾಜು ಕಡಗಣ್ಣಾರ, ಕರವೇ ಮುಖಂಡರಾದ ಶ್ರೀನಿವಾಸ, ವಿನಯ್ ವಗ್ಗರ್, ಯುವ ಕಾಂಗ್ರೆಸ್ ಉಪಾಧ್ಯಕ್ಷ ಎಚ್.ಎಸ್. ರಂಜಿತ್, ನಾಗರಾಜ್ ಮೂಳೆ, ದಲಿತ ಮುಖಂಡರಾದ ಎ.ಡಿ. ಈಶ್ವರಪ್ಪ, ದಿಡಗೂರು ತಮ್ಮಣ್ಣ, ಪರಮೇಶ್, ಮಂಜಪ್ಪ, ಪ್ರಭಾಕರ್, ಮುಕ್ತೇನಹಳ್ಳಿ ಹಾಲೇಶ್, ಬೇಲಿಮಲ್ಲೂರು ಶಿವಾನಂದ್, ಕ್ಯಾಸಿನಕೆರೆ ಶೇಖರಪ್ಪ, ಷಣ್ಮುಖಪ್ಪ, ಬೇಲಿಮಲ್ಲೂರು ನರಸಪ್ಪ, ದೇವಿಕುಮಾರ್, ಹನುಮಸಾಗರ ಮಂಜು, ಎಕ್ಕನಹಳ್ಳಿ ಪ್ರಕಾಶ್, ಮಹದೇವಪ್ಪ ಎಂಜಿನಿಯರ್, ಮರುಳಸಿದ್ದಪ್ಪ, ಭಾಷಾ, ನಸ್ರುಲ್ಲಾ, ಕುರುವ ಮಂಜು ಸೇರಿದಂತೆ, ಹಲವಾರು ಜನ ಅಹಿಂದ ಮುಖಂಡರು ಭಾಗವಹಿಸಿದ್ದರು.

## ಆವಿಷ್ಕಾರ, ನಾವೀನ್ಯತೆ ಪುರಸ್ಕಾರಕ್ಕೆ ಅರ್ಜಿ

ದಾವಣಗೆರೆ, ಡಿ.25- ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯಿಂದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪ್ರೊ. ಯು.ಆರ್. ರಾವ್ ಪುರಸ್ಕಾರ, ಪದವಿ ವಿದ್ಯಾರ್ಥಿಗಳಿಗೆ ಪ್ರೊ. ಎಸ್. ಕೆ.ಶಿವಕುಮಾರ್ ಪುರಸ್ಕಾರ ಹಾಗೂ ಜನಸಾಮಾನ್ಯರು ಮತ್ತು ಬೋಧಕರಿಗೆ ಕೆ.ಎಸ್.ಟಿ.ಎ. ಪುರಸ್ಕಾರಕ್ಕಾಗಿ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಹತೆ, ಅರ್ಜಿ ಸಲ್ಲಿಸುವ ವಿಧಾನ ಮತ್ತು ಹೆಚ್ಚಿನ ಮಾಹಿತಿಗಾಗಿ ಅಕಾಡೆಮಿಯ ವೆಬ್‌ಸೈಟ್ www.kstacademy.in ನಲ್ಲಿ ಪಡೆಯಬಹುದಾಗಿದೆ. ಅರ್ಜಿ ಸಲ್ಲಿಸಲು ಜನವರಿ 20 ಕೊನೆಯ ದಿನವಾಗಿರುತ್ತದೆ.

KA/SK/CTA-275/2021-2023. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಸಂಕ್ಷಿಪ್ತ ಸುದ್ದಿ

**ಶಾಂತಿ ಒಪ್ಪಂದಕ್ಕೆ ಉಲ್ಫಾ ಸಹಿ**
ನವದೆಹಲಿ : ಕೇಂದ್ರ ಸರ್ಕಾರ ಹಾಗೂ ಅಸ್ಸಾಂ ಸರ್ಕಾರಗಳ ಜೊತೆ ಉಲ್ಫಾ ಉಗ್ರವಾದಿ ಸಂಘಟನೆಯ ಮಾತುಕತೆ ಪರ ಬಣ ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದೆ. ಇದರ ಅನ್ವಯ ಬಣ ಹಿಂಸಾಚಾರ ತೊರೆಯಲಿದೆ, ಎಲ್ಲಾ ಶಸ್ತ್ರಾಸ್ತ್ರಗಳನ್ನು ಒಪ್ಪಿಸಲಿದೆ ಹಾಗೂ ಪ್ರಜಾಸತ್ತಾತ್ಮಕ ಪ್ರಕ್ರಿಯೆಯಲ್ಲಿ ಭಾಗಿಯಾಗಲಿದೆ.

**ಬೆಂಗಳೂರಿನಿಂದ ಅಯೋಧ್ಯೆಗೆ ನೇರ ವಿಮಾನ ಸೌಲಭ್ಯ**
ನವದೆಹಲಿ : ಬೆಂಗಳೂರು ಹಾಗೂ ಕೋಲ್ಕೊತಾಗಳಿಂದ ಅಯೋಧ್ಯೆಗೆ ನೇರ ವಿಮಾನ ಸೌಲಭ್ಯವನ್ನು ಜನವರಿ 17ರಿಂದ ಆರಂಭಿಸುವುದಾಗಿ ಏರ್ ಇಂಡಿಯಾ ಎಕ್ಸ್‌ಪ್ರೆಸ್ ತಿಳಿಸಿದೆ. ದೆಹಲಿ ಹಾಗೂ ಅಯೋಧ್ಯೆ ನಡುವೆ ನೇರ ವಿಮಾನ ಸೌಲಭ್ಯ ಆರಂಭಿಸುವುದಾಗಿ ವಿಮಾನಯಾನ ಸಂಸ್ಥೆ ಈ ಹಿಂದೆ ತಿಳಿಸಿತ್ತು.

**ಪ್ರಮುಖ ವಲಯಗಳ ಬೆಳವಣಿಗೆಯಲ್ಲಿ ಇಳಿಕೆ**
ನವದೆಹಲಿ : ಎಂಟು ಪ್ರಮುಖ ಮೂಲಭೂತ ಸೌಲಭ್ಯ ವಲಯಗಳಲ್ಲಿನ ಬೆಳವಣಿಗೆ ನವೆಂಬರ್ ತಿಂಗಳಲ್ಲಿ ಶೇ.7.8ಕ್ಕೆ ಇಳಿಕೆಯಾಗಿದೆ. ಕಚ್ಚಾ ತೈಲ ಹಾಗೂ ಸಿಮೆಂಟ್ ವಲಯದ ಹಿನ್ನಡೆ ಇದಕ್ಕೆ ಕಾರಣವಾಗಿದೆ. ಈ ಬೆಳವಣಿಗೆ ದರ ಆರು ತಿಂಗಳಲ್ಲೇ ಅತಿ ಕಡಿಮೆಯಾಗಿದೆ.

**ಯು.ಜಿ.ಸಿ. ನಿಯಮ ಮೀರಿ ಎಂ.ಫಿಲ್. ಪದವಿಗೆ ಪಶ್ಚಿಮ ಬಂಗಾಳ ನಿರ್ಧಾರ**
ಕೊಲ್ಕೊತಾ : ಎಂ.ಫಿಲ್ ಪದವಿ ನೀಡಬಾರದು ಎಂಬ ಯು.ಜಿ.ಸಿ. ನಿಯಮವನ್ನು ಧಿಕ್ಕರಿಸುವುದಾಗಿ ಪಶ್ಚಿಮ ಬಂಗಾಳದ ಶಿಕ್ಷಣ ಸಚಿವ ಬ್ರಾತ್ಯ ಬಸು ಹೇಳಿದ್ದಾರೆ. ಪಶ್ಚಿಮ ಬಂಗಾಳದ ವಿಶ್ವವಿದ್ಯಾಲಯಗಳು ಎಂ.ಫಿಲ್. ಪದವಿ ನೀಡುವುದನ್ನು ಮುಂದುವರೆಸಲಿವೆ ಎಂದವರು ತಿಳಿಸಿದ್ದಾರೆ. ಯು.ಜಿ.ಸಿ. 2022ರಿಂದಲೇ ಎಂ.ಫಿಲ್ ಪದವಿ ನೀಡುವ ಯೋಜನೆಗಳನ್ನು ನಿಲ್ಲಿಸಿದೆ.

**ಬುಡಕಟ್ಟು ಹಾಗೂ ದಲಿತ ಸಮುದಾಯದವರಿಗೆ 50 ವರ್ಷದಿಂದಲೇ ವೃದ್ಧಾಪ್ಯ ಪಿಂಚಣಿ**
ರಾಂಚಿ : ಬುಡಕಟ್ಟು ಜನರು ಹಾಗೂ ದಲಿತರಿಗೆ 50 ವರ್ಷದಿಂದಲೇ ವೃದ್ಧಾಪ್ಯ ಪಿಂಚಣಿ ನೀಡುವುದಾಗಿ ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ತಿಳಿಸಿದ್ದಾರೆ. ಈ ಸಮುದಾಯದಲ್ಲಿ ಮರಣ ಪ್ರಮಾಣ ಹೆಚ್ಚಾಗಿರುವ ಕಾರಣ ಪಿಂಚಣಿ ಪಡೆಯುವ ಅರ್ಹತಾ ವಯಸ್ಸು ಇಳಿಕೆ ಮಾಡಲಾಗಿದೆ ಎಂದವರು ಹೇಳಿದ್ದಾರೆ.

**ಸುಕನ್ಯ ಸಮೃದ್ಧಿ ಬಡ್ಡಿ ದರ ಹೆಚ್ಚಳ**
ನವದೆಹಲಿ : ಕೇಂದ್ರ ಸರ್ಕಾರ ಸುಕನ್ಯ ಸಮೃದ್ಧಿ ಯೋಜನೆಯ ಬಡ್ಡಿ ದರಗಳನ್ನು ಹೆಚ್ಚಿಸಿದೆ. ಮೂರು ವರ್ಷಗಳ ಅವಧಿಯ ಠೇವಣಿಯ ಬಡ್ಡಿಯನ್ನು 20 ಮೂಲ ಅಂಕಗಳಷ್ಟು ಹೆಚ್ಚಿಸಲಾಗಿದೆ. ಜನವರಿ - ಮಾರ್ಚ್ ಚತುರ್ಥದ ಬಡ್ಡಿ ದರವನ್ನು 10 ಮೂಲ ಅಂಕಗಳಷ್ಟು ಹೆಚ್ಚಿಸಲಾಗಿದೆ. ಉಳಿದ ಎಲ್ಲಾ ಸಣ್ಣ ಉಳಿತಾಯ ಯೋಜನೆಗಳ ಬಡ್ಡಿ ದರಗಳನ್ನು ಯಥಾಸ್ಥಿತಿಯಲ್ಲಿ ಮುಂದುವರೆಸಲಾಗಿದೆ.

**ಬಡ್ತಿಯಲ್ಲಿ ದಿವ್ಯಾಂಗರಿಗೆ ಮೀಸಲಾತಿ : ಕೇಂದ್ರದ ನಿರ್ಧಾರ**
ನವದೆಹಲಿ : ದಿವ್ಯಾಂಗರಿಗೆ ಬಡ್ತಿಯಲ್ಲಿ ಮೀಸಲಾತಿ ನೀಡಲು ಕೇಂದ್ರ ಸರ್ಕಾರ ಪ್ರಮುಖ ನಿರ್ಧಾರ ತೆಗೆದುಕೊಂಡಿದೆ. ತಳ ಹಂತದಿಂದ ಗ್ರೂಪ್ ಎ ಹಂತದವರೆಗೆ ಬಡ್ತಿಯಲ್ಲಿ ಮೀಸಲಾತಿ ಕಲ್ಪಿಸಲು ನಿರ್ಧರಿಸಲಾಗಿದೆ.

**ಸಿ - ಹೆವಿ ಮೊಲಾಸಿಸ್ ಎಥೆನಾಲ್‌ಗೆ 6.87 ರೂ.ಗಳ ಉತ್ತೇಜನ**
ನವದೆಹಲಿ : ಸಿ- ಹೆವಿ ಮೊಲಾಸಿಸ್ ಮೂಲಕ ಉತ್ಪಾದಿಸಲಾಗುವ ಎಥೆನಾಲ್‌ಗೆ ಪ್ರತಿ ಲೀಟರ್‌ಗೆ 6.87 ರೂ.ಗಳ ಉತ್ತೇಜನ ನೀಡುವುದಾಗಿ ಸರ್ಕಾರಿ ಸ್ವಾಮ್ಯದ ಚಿಲ್ಲರೆ ತೈಲ ಮಾರಾಟ ಕಂಪನಿಗಳು ಹೇಳಿವೆ. ಸಿ-ಮೊಲಾಸಿಸ್ ಮೂಲಕ ಎಥೆನಾಲ್ ಉತ್ಪಾದನೆಗೆ ಉತ್ತೇಜನ ನೀಡಲು ಈ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಹಸಿರು ಆರ್ಥಿಕತೆಗೆ ಈ ಕ್ರಮ ನೆರವಾಗಲಿದೆ.

# ಹೊಸ ವರ್ಷ ಸಂಭ್ರಮಾಚರಣೆ : ಅಸಭ್ಯ ವರ್ತನೆಗೆ ಕಠಿಣ ಕ್ರಮ

ದಾವಣಗೆರೆ, ಡಿ. 29- 2024ನೇ ವರ್ಷಕ್ಕೆ ಹೆಜ್ಜೆ ಇಡುತ್ತಿರುವ ಜಿಲ್ಲೆಯ ಜನತೆಗೆ ಶುಭಾಶಯ ಕೋರಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್ ಅವರು ಹೊಸ ವರ್ಷಾಚರಣೆ ಸಂದರ್ಭದಲ್ಲಿ ಕಾನೂನು ಹಾಗೂ ಸುವ್ಯವಸ್ಥೆ ಹಿತದೃಷ್ಟಿ ಯಿಂದ ಕೆಲವು ಸೂಚನೆಗಳನ್ನೂ ನೀಡಿದ್ದಾರೆ.

ಹೊಸ ವರ್ಷಾಚರಣೆ ಪ್ರಯುಕ್ತ ಕುಡಿದು ವಾಹನ ಚಾಲನೆ ಮಾಡುವುದು, ವಾಹನಗಳಲ್ಲಿ ಹೆಚ್ಚಿನ ಜನರು ಸವಾರಿ ಮಾಡುವುದನ್ನು ನಿಷೇಧಿಸಿದ್ದು, ಅಂತವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು.

ನಗರದ ಆಯಕಟ್ಟಿನ ಸ್ಥಳಗಳಲ್ಲಿ, ಮಹಿಳೆಯರ ಪಿ.ಜಿ., ಮತ್ತು ಹಾಸ್ಟೆಲ್‌ಗಳ ಬಳಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿರುತ್ತದೆ. ಬಾರ್ ಮತ್ತು ರೆಸ್ಟೋರೆಂಟ್, ವೈನ್ ಶಾಪ್‌ಗಳು ನಿಗದಿಪಡಿಸಿದ ಸಮಯಕ್ಕೆ ಬಂದ್ ಮಾಡಲು ಸೂಚಿಸಲಾಗಿದೆ.

ಆಯಕಟ್ಟಿನ ಸ್ಥಳಗಳಲ್ಲಿ ಕೆಎಸ್‌ಆರ್‌ಪಿ ಮತ್ತು ಡಿಎಆರ್ ತುಕಡಿಗಳನ್ನು ನಿಯೋಜಿಸಲಾಗಿದೆ. ಹೊಸ ವರ್ಷಾಚರಣೆಯಲ್ಲಿ ಯುವಕರು ಅಶ್ಲೀಲವಾಗಿ, ಅಸಭ್ಯವಾಗಿ ವರ್ತನೆ ಮಾಡಿದರೆ ಅಂತವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು. ನಗರದ ಹೊರ ವಲಯಗಳಾದ ಕೊಂಡಜ್ಜಿ ಕೆರೆ,



ದೇವರಬೆಳಕೆರೆ ಚೆಕ್ ಡ್ಯಾಂ ಮತ್ತು ಇತರೆ ಹೊರ ಭಾಗಗಳಲ್ಲೂ ಪೊಲೀಸ್

### ಎಸ್ಪಿ ಉಮಾ ಪ್ರಶಾಂತ್ ಎಚ್ಚರಿಕೆ

ನಿಯೋಜಿಸಲಾಗಿದೆ. ವಾಹನಗಳನ್ನು ಅತೀ ವೇಗವಾಗಿ ಚಾಲನೆ ಮಾಡುತ್ತಾ, ಸಾರ್ವಜನಿಕರಿಗೆ ತೊಂದರೆಯಾಗುವಂತೆ ಜೋರಾಗಿ ಕೂಗುವುದು, ಕಿರುಚುವುದನ್ನು ನಿಷೇಧಿಸಿ ಲಾಗಿದೆ. ಜಿಲ್ಲೆಯ ತಾಲ್ಲೂಕು ಕೇಂದ್ರಗಳಾದ ಹರಿಹರ, ಹೊನ್ನಾಳಿ, ಚನ್ನಗಿರಿ, ಜಗಳೂರು, ನ್ಯಾಮತಿ ಪಟ್ಟಣಗಳಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

ನಗರದ ವಿವಿಧ ಕಡೆಗಳಲ್ಲಿ ಚೆಕ್ ಪೋಸ್ಟ್‌ಗಳನ್ನು ತೆರೆದಿದ್ದು, ಕುಡಿದು ವಾಹನಗಳನ್ನು ಚಾಲನೆ ಮಾಡುವವರ, ತ್ರಿಬಲ್ ರೈಡಿಂಗ್ ಮಾಡುವವರ ವಿರುದ್ಧ ಸೂಕ್ತ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗುವುದು.

ಕೋವಿಡ್ 19 ಉಪ ತಳಿ ಜೆಎನ್.1 ವೈರಸ್ ವ್ಯಾಪಿಸುತ್ತಿರುವುದರಿಂದ ಸರ್ಕಾರದ ಮಾರ್ಗ ಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಜನ ಸಂದಣಿ ಪ್ರದೇಶಗಳಲ್ಲಿ ಪಟಾಕಿಗಳನ್ನು ಸಿಡಿಸಬಾರದು.ಸೌಂಡ್ ಸಿಸ್ಟಂ ಮತ್ತು ಡಿಜೆಗಳನ್ನು ಉಪಯೋಗಿಸಬಾರದು ಎಂದು ಎಸ್ಪಿ ಉಮಾ ಅವರು ಪ್ರಕಟಣೆಯಲ್ಲಿ ಎಚ್ಚರಿಕೆ ನೀಡಿದ್ದಾರೆ.

# 4 ಕ್ಷೇತ್ರಗಳಲ್ಲಿ ಮಾತ್ರ ಜೆಡಿಎಸ್ ಸ್ಪರ್ಧೆ

ಬೆಂಗಳೂರು, ಡಿ. 29 - ಹಾಸನ, ಮಂಡ್ಯ, ತುಮಕೂರು ಹಾಗೂ ಕೋಲಾರ ಲೋಕಸಭಾ ಕ್ಷೇತ್ರಗಳಲ್ಲಿ ಮಾತ್ರ ಸ್ಪರ್ಧಿಸ ಲಿರುವ ಜೆಡಿಎಸ್, ಉಳಿದ 24 ಕ್ಷೇತ್ರ ಗಳಲ್ಲಿ ಮಿತ್ರ ಪಕ್ಷ ಬಿಜೆಪಿಯನ್ನು ಬೆಂಬಲಿ ಸಲಿದೆ ಎಂದು ಮೂಲಗಳು ತಿಳಿಸಿವೆ.



ಮುಂಬರುವ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ 28 ಕ್ಷೇತ್ರಗಳಲ್ಲಿ ಬಿಜೆಪಿ-ಜೆಡಿಎಸ್ ಜಂಟಿಯಾಗಿ ಚುನಾವಣೆ ಎದುರಿಸಲಿವೆ.

ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ, ರಾಜ್ಯಾಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಕಳೆದ ವಾರ ನವದೆಹಲಿಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರನ್ನು ಭೇಟಿ ಮಾಡಿದ ನಂತರ ಸೀಟು ಹೊಂದಾಣಿಕೆ ಅಂತಿಮಗೊಳಿಸಲಾಗಿದ್ದು, ಬಹಿರಂಗ ಪಡಿಸಲಾಗಿಲ್ಲ.

ದೆಹಲಿಯಿಂದ ಹಿಂತಿರುಗುತ್ತಿದ್ದಂತೆ ಕುಮಾರ ಸ್ವಾಮಿ ತಮ್ಮ ಪಾಲಿಗೆ ಬಂದಿರುವ ಕ್ಷೇತ್ರಗಳನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡು, ಆ ಕ್ಷೇತ್ರಗಳಲ್ಲಿ ಚುನಾವಣಾ ಪ್ರಕ್ರಿಯೆ ಆರಂಭಿಸಿದ್ದಾರೆ. ಪ್ರತಿನಿತ್ಯ ಈ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಬರುವ ಶಾಸಕರು, ಮುಖಂಡರು, ಪಕ್ಷದ ಪ್ರಮುಖ ಕಾರ್ಯಕರ್ತರೊಂದಿಗೆ ನಿರಂತರ ಚರ್ಚೆಯಲ್ಲಿದ್ದಾರೆ.

ಈ ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳು ಯಾರಾಗಬೇಕು ಎಂಬುದಕ್ಕೆ ಬಿಜೆಪಿ ಜೊತೆ ಕೈಜೋಡಿಸಿ ಪ್ರತ್ಯೇಕ ಸಮೀಕ್ಷೆಯನ್ನು ಆರಂಭಿಸಿದ್ದಾರೆ.

ಬಿಜೆಪಿ ಈಗಾಗಲೇ ರಾಜ್ಯದ 28 ಲೋಕಸಭಾ ಕ್ಷೇತ್ರಗಳಲ್ಲೂ ಪ್ರತ್ಯೇಕ ಸಮೀಕ್ಷೆಗಳನ್ನು ನಡೆಸಿ ವರದಿ ಪಡೆದಿದ್ದರೂ, ಮತ್ತೆ ಸರ್ವೆ ಕಾರ್ಯ ನಡೆಸುತ್ತಿದೆ. ಜೆಡಿಎಸ್ ಕೈಗೊಂಡಿರುವ ಸಮೀಕ್ಷಾ ವರದಿ ಜನವರಿ ಮಧ್ಯಭಾಗದ ವೇಳೆಗೆ ಕೈಸೇರಲಿದ್ದು, ಇದನ್ನು ಆಧರಿಸಿ ಅಭ್ಯರ್ಥಿಗಳ ಆಯ್ಕೆ ನಡೆಯಲಿದೆ.

ಇದಕ್ಕೂ ಮುನ್ನ ಕುಮಾರಸ್ವಾಮಿ, ಸ್ವತಃ ತಮ್ಮ ಬಿಡದಿ ತೋಟದಲ್ಲಿ ಕುಳಿತು ಕಾರ್ಯಕರ್ತರಿಂದ, ಮುಖಂಡರಿಂದ ಅಭಿಪ್ರಾಯ ಸಂಗ್ರಹಿಸುತ್ತಿದ್ದಾರೆ.

ಈ ನಾಲ್ಕು ಲೋಕಸಭಾ ಕ್ಷೇತ್ರಗಳಲ್ಲಿ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರಲ್ಲಿ ಏನಾದರೂ ಭಿನ್ನಾಭಿಪ್ರಾಯವಿದ್ದರೆ, ಅದನ್ನು ಬಗೆಹರಿಸುವಲ್ಲಿ ನಿರತರಾಗಿದ್ದಾರೆ. ದೆಹಲಿಯಿಂದ ಬಂದ ನಂತರ ಸಮಯವನ್ನು ವ್ಯರ್ಥ ಮಾಡದೆ, ಪೂರ್ಣ ಪ್ರಮಾಣದಲ್ಲಿ ತಮ್ಮನ್ನು ಚುನಾವಣಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದು, ತಮ್ಮ ಕುಟುಂಬದ ಯಾರೂ ಹಸ್ತಕ್ಷೇಪ ಮಾಡದಂತೆ ಎಚ್ಚರ ವಹಿಸಿದ್ದಾರೆ.

ತುಮಕೂರು ಹಾಗೂ ಕೋಲಾರ ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಪಕ್ಷದ ಕಾರ್ಯಕರ್ತರ ಜೊತೆಗೆ ಬಿಜೆಪಿ ಮುಖಂಡರ ಜೊತೆಯೂ ಸಂಪರ್ಕದಲ್ಲಿದ್ದು, ಸಂಘಟನೆ ಮತ್ತು ಚುನಾವಣೆ ಸಂಬಂಧ ಸಹಕಾರ ಪಡೆದುಕೊಳ್ಳುತ್ತಿದ್ದಾರೆ.

ಈ ಕ್ಷೇತ್ರಗಳಲ್ಲಿ ಕಾರ್ಯಕರ್ತರನ್ನು ಒಗ್ಗೂಡಿ ಸುವ ಕಾರ್ಯವನ್ನು ಜನವರಿ ಮಧ್ಯಭಾಗದೊಳಗೆ ಪೂರ್ಣಗೊಳಿಸಿ, ಸಂಕ್ರಾಂತಿ ನಂತರ ಚುನಾವಣಾ ಪ್ರಚಾರವನ್ನು ಆರಂಭಿಸಲು ತೀರ್ಮಾನಿಸಿದ್ದಾರೆ.

ತಾವು ಪ್ರಚಾರ ಕೈಗೊಳ್ಳುವ ಸಂದರ್ಭದಲ್ಲಿ ಬಿಜೆಪಿ ನಾಯಕರನ್ನು ವಿಶ್ವಾಸಕ್ಕೆ ತೆಗದುಕೊಳ್ಳುವ ಜೊತೆಗೆ ಅವರನ್ನೂ ಈ ಪ್ರಕ್ರಿಯೆಯಲ್ಲಿ ಬಳಸಿಕೊಳ್ಳಲಿದ್ದಾರೆ ಎನ್ನಲಾಗುತ್ತಿದೆ.

ಜೆಡಿಎಸ್ ಬಯಸಿದಲ್ಲಿ ಬೆಂಗಳೂರು ಗ್ರಾಮಾಂತರ ಸೇರಿದಂತೆ ಹೈದರಾಬಾದ್ ಕರ್ನಾಟಕದಲ್ಲಿ ಒಂದು ಕ್ಷೇತ್ರವನ್ನು ಬಿಟ್ಟುಕೊಡಲು ಬಿಜೆಪಿ ವರಿಷ್ಠರೇ ಆಸಕ್ತಿ ತೋರಿದ್ದರು, ಆದರೆ, ಕುಮಾರಸ್ವಾಮಿ ನಾಲ್ಕು ಕ್ಷೇತ್ರಗಳಿಗೆ ತಮ್ಮನ್ನು ಸೀಮಿತಗೊಳಿಸಿ ಕೊಂಡಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

## ಹಿರಿಯ ಶಾಸಕರಿಗೆ ರಾಜ್ಯ ಸರ್ಕಾರದಲ್ಲಿ ಮಹತ್ವದ ಸ್ಥಾನ

(1ನೇ ಪುಟದಿಂದ) ಮಾಡಲಾಗಿದೆ. ಯಲಬುರ್ಗಾ ಶಾಸಕ ಬಸವರಾಜ ರಾಯರೆಡ್ಡಿ ಅವರನ್ನು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರನ್ನಾಗಿ ನೇಮಿಸಲಾಗಿದೆ. ಆಳಂದ ಶಾಸಕ ಬಿ. ಆರ್. ಪಾಟೀಲ್ ಅವರನ್ನು ಮುಖ್ಯಮಂತ್ರಿಗಳ ಸಲಹೆಗಾರರನ್ನಾಗಿ ನೇಮಕ ಮಾಡಲಾಗಿದೆ.

ಈ ಮೂವರೂ ಶಾಸಕರು ಸಚಿವರಾಗಲು ತೀವ್ರ ಯತ್ನ ನಡೆಸಿದ್ದರು. ಇವರು ಸಚಿವರ ಕಾರ್ಯ ವೈಖರಿ ಕುರಿತು ಅಸಮಾಧಾನ ಕೂಡ ವ್ಯಕ್ತಪಡಿಸಿದ್ದರು. ಶಾಸಕರ ಪತ್ರಗಳಿಗೆ ಸಚಿವರು ಕಿಮ್ಮತ್ತು ನೀಡುತ್ತಿಲ್ಲ ಎಂದು ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಆಕ್ರೋಶ ವ್ಯಕ್ತಪಡಿಸಿದ್ದರು.

# ಶಾಸಕ ಯತ್ನಾಳ್ ಹೇಳಿಕೆಗಳ ಬಗ್ಗೆ ವರಿಷ್ಠರಿಂದ ನಿರ್ಧಾರ

ದಾವಣಗೆರೆ, ಡಿ. 29 – ಬಿಜೆಪಿ ರಾಜ್ಯ ನಾಯಕರ ವಿರುದ್ಧ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ನೀಡುತ್ತಿರುವ ಹೇಳಿಕೆಗಳ ಬಗ್ಗೆ ವರಿಷ್ಠರು ನಿರ್ಧಾರ ತೆಗೆದುಕೊಳ್ಳಲಿದ್ದಾರೆ ಎಂದು ಕೇಂದ್ರ ಸಚಿವ ಹಾಗೂ ಬಿಜೆಪಿ ನಾಯಕ ಪ್ರಹ್ಲಾದ್ ಜೋಷಿ ಹೇಳಿದ್ದಾರೆ.

ಪಕ್ಷದ ಕಾರ್ಯಕರ್ತರು ಹಾಗೂ ನಾಯಕರು ಏನೇ ವಿಷಯಗಳಿದ್ದರೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಇಲ್ಲವೇ ಇತರೆ ಕೇಂದ್ರ ನಾಯಕರ ಜೊತೆ ಮಾತನಾಡಬೇಕು. ಸಾರ್ವಜನಿಕವಾಗಿ ಇಲ್ಲ ವೇ ಮಾಧ್ಯಮಗಳ ಎದುರು ಹೇಳಿಕೆ ನೀಡುವುದನ್ನು ನಿಲ್ಲಿಸಬೇಕು ಎಂದವರು ತಿಳಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಜೋಷಿ, ಪ್ರಧಾನ ಮಂತ್ರಿ ಸೇರಿದಂತೆ ಎಲ್ಲ ಸಂಬಂಧಿಸಿದವರ ಜೊತೆ ಚರ್ಚೆ ನಡೆಸಿದ ನಂತರ ರಾಷ್ಟ್ರೀಯ ಅಧ್ಯಕ್ಷರು ಹೊಸ ರಾಜ್ಯಾಧ್ಯಕ್ಷರನ್ನು ನೇಮಿಸಿದ್ದಾರೆ. ಏನಾದರೂ ತಪ್ಪು - ಸರಿ ಆಗುತ್ತಿದೆ ಎಂದರೆ ವರಿಷ್ಠರ ಜೊತೆ ಮಾತನಾಡಬೇಕು. ಬಹಿರಂಗ ಹೇಳಿಕೆ ಒಪ್ಪುವುದಿಲ್ಲ. ತಕ್ಷಣ ಇಂತಹ ಹೇಳಿಕೆ ನಿಲ್ಲಿಸಬೇಕು ಎಂದು ಹೇಳಿದರು. ಯತ್ನಾಳ್ ಹಾಲಿ ಶಾಸಕರಿದ್ದಾರೆ. ಅವರ ಜೊತೆ ಮಾತನಾಡುವ ಇಲ್ಲವೇ ಕ್ರಮ ತೆಗೆದುಕೊಳ್ಳುವ ಬಗ್ಗೆ ನಮ್ಮ ರಾಷ್ಟ್ರೀಯ ಅಧ್ಯಕ್ಷರು ಹಾಗೂ ಕೇಂದ್ರ ಘಟಕ ನಿರ್ಧರಿಸಲಿದೆ ಎಂದವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಬಿಜೆಪಿ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಹಿಂದಿನ ಸರ್ಕಾರದಲ್ಲಿ 40 ಸಾವಿರ ಕೋಟಿ ರೂ.ಗಳ ಹಗರಣ ನಡೆದಿದೆ ಎಂದು ಯತ್ನಾಳ್ ಇತ್ತೀಚೆಗಷ್ಟೇ ಆರೋಪಿಸಿದ್ದರು. ಯತ್ನಾಳ್ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಪಕ್ಷದ ಒಂದು ವರ್ಗ ಒತ್ತಾಯಿಸುತ್ತಿದೆ.

ಪಕ್ಷದ ಪದಾಧಿಕಾರಿಗಳ ನೇಮಕದಲ್ಲಿ ಯಡಿಯೂರಪ್ಪ ಬಣಕ್ಕೆ ಮೇಲುಗೈ ಆಗಿದೆ ಎಂಬ



ಪ್ರಶ್ನೆಗೆ ಉತ್ತರಿಸಿದ ಜೋಷಿ, ಪಕ್ಷದಲ್ಲಿರುವ ಎಲ್ಲರೂ ಬಿಜೆಪಿಯವರೇ. ಬಿಜೆಪಿಯಲ್ಲಿ ಇರುವ ಯಾರೇ ಆಗಲಿ ಒಬ್ಬರಿಗೆ ಆಪ್ತರು, ಇನ್ನೊಬ್ಬರಿಗೆ ಆಪ್ತರು ಎಂದಲ್ಲ ಎಂದು ತಿಳಿಸಿದರು.

ಬಿಜೆಪಿಯನ್ನು ಬುರುಡೆ ಸರ್ಕಾರ ಎಂದು ಹೇಳಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ತರಾಟೆಗೆ ತೆಗೆದುಕೊಂಡ ಜೋಷಿ, 1971ರಲ್ಲಿ ಗರೀಬಿ ಹಟಾವೋ ಎಂದು ಹೇಳಿದ್ದ ಕಾಂಗ್ರೆಸ್ ಪಕ್ಷದವರಿಗೆ ಕನಿಷ್ಠ ಅಡುಗೆ ಅನಿಲ ಸಂಪರ್ಕ ಕೊಡಲೂ ಸಾಧ್ಯವಾಗಲಿಲ್ಲ ಎಂದು ಟೀಕಿಸಿದರು.

1960 ರಿಂದ 2014ರ ನಡುವೆ ಸೂರು ಒದಗಿಸುವ ಯೋಜನೆ ಎಂದು ಕೇವಲ 3.30 ಕೋಟಿ ಮನೆ ಕೊಟ್ಟರು. ನಾವು ಹತ್ತು ವರ್ಷಗಳಲ್ಲಿ 4 ಕೋಟಿ ಮನೆ ಕೊಟ್ಟಿದ್ದೇವೆ. ಯಾರದು ಬುರುಡೆ ಸರ್ಕಾರ? ಎಂದು ಪ್ರಶ್ನಿಸಿದರು.

ಕನ್ನಡ ಹೋರಾಟಗಾರರ ವಿರುದ್ಧ ಪ್ರಕರಣ ದಾಖಲಿಸಿರುವುದಕ್ಕೂ ಆಕ್ಷೇಪಿಸಿದ ಜೋಷಿ, ಕೆ.ಜೆ. ಹಳ್ಳಿ - ಡಿ.ಜೆ. ಹಳ್ಳಿಯಂತಹ ಪ್ರಕರಣಗಳಲ್ಲಿ ಆರೋಪಿಗಳನ್ನು ಕೈ ಬಿಡಲು ಪತ್ರ ಬರೆಯಲಾಗುತ್ತದೆ. ಇಲ್ಲಿ ಕನ್ನಡ ಹೋರಾಟಗಾರರನ್ನು ಜೈಲಿಗೆ ಅಟ್ಟುವ ಕೆಲಸ ಮಾಡಲಾಗುತ್ತಿದೆ ಎಂದರು.

ಹೋರಾಟ ಮಾಡಿದವರಿಗೆ ಎಚ್ಚರಿಕೆ ಕೊಡಿ. ಹಿಂಸೆ ನಡೆದಿದ್ದರೆ ಸೀಮಿತವಾಗಿ ಪ್ರಕರಣಗಳನ್ನು ದಾಖಲಿಸಿ. ಈ ಹಿಂದೆಯೂ ಎಷ್ಟೋ ಪ್ರಕರಣಗಳನ್ನು ಹೀಗೇ ಬಿಡಲಾಗಿದೆ. ಕರ್ನಾಟಕದಲ್ಲಿ ಕನ್ನಡ ಪ್ರಧಾನ ಭಾಷೆ ಎಂದು ಬಾಯಿ ಮಾತಿನಲ್ಲಿ ಹೇಳುತ್ತಾ, ಈಗ ಪ್ರಕರಣ ದಾಖಲಿಸುತ್ತಿರುವುದು ಖಂಡನೀಯ ಎಂದರು.

# ಚೆಕ್‌ಬೌನ್ಸ್ ಪ್ರಕರಣ : ಸಚಿವ ಮಧು ಬಂಗಾರಪ್ಪಗೆ ಶಿಕ್ಷೆ

ಬೆಂಗಳೂರು, ಡಿ. 29 – ಚೆಕ್‌ಬೌನ್ಸ್ ಪ್ರಕರಣದಲ್ಲಿ ಶಿಕ್ಷಣ ಸಚಿವ ಮಧು ಬಂಗಾರಪ್ಪಗೆ ನ್ಯಾಯಾಲಯ ಜೈಲು ಶಿಕ್ಷೆ ವಿಧಿಸಿದೆ.

ಸಂಸದರು ಹಾಗೂ ಶಾಸಕರ ವಿಶೇಷ ನ್ಯಾಯಾಲಯ ಈ ತೀರ್ಪು ನೀಡಿದ್ದು, ಮಧು ಬಂಗಾರಪ್ಪ ಅವರು ರಾಜೇಶ್ ಎಕ್ಸ್‌ಪೋರ್ಟ್ಸ್‌ಗೆ 6.96 ಕೋಟಿ ರೂ. ನೀಡಬೇಕು ಹಾಗೂ 10 ಸಾವಿರ ರೂ.ಗಳನ್ನು ಸರ್ಕಾರಕ್ಕೆ ಜಮಾ ಮಾಡಬೇಕು ಎಂದು ತಿಳಿಸಿದೆ.

ಈ ಮೊತ್ತವನ್ನು ಪಾವತಿಸದೇ ಇದ್ದರೆ ಸಚಿವರು 6 ತಿಂಗಳ ಸಾಧಾರಣ ಜೈಲು ಶಿಕ್ಷೆಗೆ ಗುರಿಯಾಗಬೇಕು ಎಂದು ತಿಳಿಸಲಾಗಿದೆ.

ಆಕಾಶ್ ಆಡಿಯೋ - ವಿಡಿಯೋ ನಿರ್ದೇಶಕರಾಗಿ ಮಧು ಬಂಗಾರಪ್ಪ ನಡೆಸಿದ



ವಹಿವಾಟಿಗೆ ಸಂಬಂಧಿಸಿದಂತೆ ಈ ಶಿಕ್ಷೆ ವಿಧಿಸಲಾಗಿದೆ.

ಆಕಾಶ್ ಆಡಿಯೋ ಹಾಗೂ ಮಧು ಬಂಗಾರಪ್ಪ ಅವರು ಚೆಕ್ ಬೌನ್ಸ್ ಉಲ್ಲಂಘನೆ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎಂದು ನ್ಯಾಯಾಲಯದ ತೀರ್ಪಿನಲ್ಲಿ ತಿಳಿಸಲಾಗಿದೆ. ಈ ಪ್ರಕರಣವನ್ನು ಸಚಿವರು ವಿಳಂಬಗೊಳಿಸುವ ವರ್ತನೆ ತೋರಿದ್ದಾರೆ ಎಂದೂ ತೀರ್ಪಿನಲ್ಲಿ ಟೀಕಿಸಲಾಗಿದೆ.

ಆಕಾಶ್ ಆಡಿಯೋ - ವಿಡಿಯೋ ಕಂಪನಿಯು ರಾಜೇಶ್ ಎಕ್ಸ್‌ಪೋರ್ಟ್ಸ್‌ನಿಂದ 6 ಕೋಟಿ ರೂ. ಅಂತರ ಕಾರ್ಪೊರೇಟ್ ಹೂಡಿಕೆ ಪಡೆದಿತ್ತು. ಇದಕ್ಕಾಗಿ ಮಧು ಬಂಗಾರಪ್ಪ ಅವರು 6.6 ಕೋಟಿ ರೂ.ಗಳ ಚೆಕ್ ನೀಡಿದ್ದರು. ಆದರೆ, ಈ ಚೆಕ್ ನವೆಂಬರ್ 27, 2011ರಲ್ಲಿ ಬೌನ್ಸ್ ಆಗಿತ್ತು. ನಂತರ 2012ರಲ್ಲಿ ರಾಜೇಶ್ ಎಕ್ಸ್‌ಪೋರ್ಟ್ಸ್ ನ್ಯಾಯಾಲಯದಲ್ಲಿ ಅರ್ಜಿ ದಾಖಲಿಸಿ ಚೆಕ್ ಹಣ ಹಾಗೂ ಪರಿಹಾರ ಕೇಳಿತ್ತು. 2022ರಲ್ಲಿ ಪ್ರಕರಣವನ್ನು ವಿಶೇಷ ನ್ಯಾಯಾಲಯಕ್ಕೆ ವರ್ಗಾಯಿಸಲಾಗಿತ್ತು.

ಈ ಪ್ರಕರಣ ಕೈ ಬಿಡುವಂತೆ ಮಧು ಬಂಗಾರಪ್ಪ ಅವರು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು. ಆದರೆ, ಹೈಕೋರ್ಟ್ ಅವರ ಅರ್ಜಿಯನ್ನು ತಳ್ಳಿ ಹಾಕಿತ್ತು. ಹೈಕೋರ್ಟ್‌ನಲ್ಲಿ ಅರ್ಜಿ ಬಾಕಿ ಇರುವಾಗ ಮಧು ಬಂಗಾರಪ್ಪ 50 ಲಕ್ಷ ರೂ. ಪಾವತಿಸಿದ್ದರು.

ಜನವರಿ 30, 2024ರ ಒಳಗೆ ಉಳಿದ 6.10 ಕೋಟಿ ರೂ. ಹಣ ಪಾವತಿಸುವುದಾಗಿ ಮಧು ಬಂಗಾರಪ್ಪ ಅವರು ವಿಶೇಷ ನ್ಯಾಯಾಲಯದ ಎದುರು ಡಿಸೆಂಬರ್ 26, 2023 ರಂದು ಮುಚ್ಚಳಿಕೆ ಬರೆದು ಕೊಟ್ಟಿದ್ದರು.

ಆರೋಪಿ ನ್ಯಾಯಾಲಯದ ಎದುರು ಮುಚ್ಚಳಿಕೆ ಬರೆದು ಕೊಡುವ, ಆದರೆ ಪಾಲಿಸದ ವರ್ತನೆ ತೋರಿದ್ದಾರೆ. ಪದೇ ಪದೇ ಈ ರೀತಿಯ ವರ್ತನೆ ತೋರಲಾಗಿದೆ. ಅಲ್ಲದೇ, ಒಂದು ವರ್ಷದಿಂದ ಈ ಪ್ರಕರಣ ವಿಳಂಬಗೊಳಿಸಲು ಪ್ರಯತ್ನ ನಡೆಸಿದ್ದಾರೆ ಎಂದು ಹೇಳಿರುವ ನ್ಯಾಯಾಲಯ, ಶಿಕ್ಷೆಗೆ ಆದೇಶ ಹೊರಡಿಸಿದೆ.

# ಪತ್ರಿಕಾ ವಿತರಕರ ಪತ್ತಿನ ಸಹಕಾರ ಸಂಘ ಅಸ್ತಿತ್ವಕ್ಕೆ

ದಾವಣಗೆರೆ, ಡಿ. 29 - ಪತ್ರಿಕಾ ವಿತರಕರ ಏಳಿಗೆಗಾಗಿ ಭವಿಷ್ಯದಲ್ಲಿ ಆರ್ಥಿಕ ಸಬಲೀಕರಣಕ್ಕಾಗಿ ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಪತ್ತಿನ ಸಹಕಾರ ಸಂಘ ಸ್ಥಾಪಿಸಲು ಒಕ್ಕೂಟದ ರಾಜ್ಯಾಧ್ಯಕ್ಷ ಕೆ.ಶಂಭುಲಿಂಗರವರ ವಿಷಯ ಮಂಡನೆಗೆ ಸರ್ವ ಸದಸ್ಯರ ಒಮ್ಮತದ ನಿರ್ಣಯ ಅಂಗೀಕಾರವಾಯಿತು.

ತುಮಕೂರಿನ ಪತ್ರಿಕಾ ಭವನದಲ್ಲಿ ಕರೆದಿದ್ದ ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ಸರ್ವ ಸದಸ್ಯರ ಸಭೆ ಯಲ್ಲಿ ಮಹತ್ತರ ತೀರ್ಮಾನಗಳು ಜರುಗಿದವು. ಅದರಲ್ಲಿ ಬಹು ಮುಖ್ಯವಾಗಿ ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಪತ್ತಿನ ಸಹಕಾರ ಸಂಘವನ್ನು ಸ್ಥಾಪಿಸಲು ನಿರ್ಧರಿಸಲಾಯಿತು.

ಗೌರವಾಧ್ಯಕ್ಷರಾಗಿ ತುಮಕೂರಿನ ಸಿದ್ದಪ್ಪ, ಹಂಗಾಮಿ ಅಧ್ಯಕ್ಷರಾಗಿ ಮೈಸೂರಿನ ವಾಮದೇವ್ ಉಪಾಧ್ಯಕ್ಷರಾಗಿ ಬೆಂಗಳೂರಿನ ಗೋಪಾಲ್ ಕಾರ್ಯದರ್ಶಿಯಾಗಿ ಬೆಂಗಳೂರಿನ ಪ್ರಶಾಂತ್ ಕುಮಾರ್ ಖಜಾಂಚಿಯಾಗಿ ತುಮಕೂರಿನ ಚೆಲುವರಾಜ್ (ರಘು) ಆಯ್ಕೆ ಮಾಡಲಾಯಿತು.

ನಿರ್ದೇಶಕರಾಗಿ ದಾವಣಗೆರೆ ಕೃಷ್ಣಮೂರ್ತಿ,



ಹಾವೇರಿಯ ಜಯಪ್ಪ ಬಣಕಾರ್, ಬಿಜಾಪುರದ ಗಣೇಶ್, ಚನ್ನರಾಯಪಟ್ಟಣದ ಪುಟ್ಟರಾಜು, ಧಾರವಾಡದ ಶಿವರಾಂ ಶಿರುಗುಪ್ಪಿ, ಚಾಮರಾಜನಗರದ ಪುರುಷೋತ್ತಮ್, ಬೆಳಗಾವಿಯ ನಾಮದೇವ ಕಳ್ಳಿಗುದ್ದಿ, ಚಿತ್ರದುರ್ಗದ ಪ್ರಶಾಂತ್, ಬೆಂಗಳೂರಿನ ಜಗದೀಶ್, ಯಲಹಂಕ ವೀರಭದ್ರ, ಬೆಂಗಳೂರಿನ ಸುಳ್ಯ ಸರ್ಕಲ್ ಸರವಣ, ತುಮಕೂರಿನ ರುದ್ರೇಶ್, ಲೋಕೇಶ್ ಭದ್ರಾಚಾರ್, ತಿಪಟೂರಿನ ಪಾಂಡುರಂಗ, ಚಿಕ್ಕಮಗಳೂರಿನ ಅಭಿಲಾಶ್, ನೆಲಮಂಗಲದ ನಾಗರಾಜ್, ವಿಜಯನಗರದ ಅನಿಲ್ ಥೋರತ್ ಕೃಷ್ಣಪ್ಪ ಇಸರಗೊಂಡ, ಗಾಂಧಿನಗರದ ಶಿವಶಾಂತ್ ಕುಮಾರ್, ಶ್ರೀಧರ್, ಮಹಿಳಾ ಪ್ರತಿನಿಧಿಯಾಗಿ ವಿ.ಎ. ರಾಧಾಮಣಿ ಹಾಗೂ ಕಾನೂನು ಸಲಹೆಗಾರರನ್ನಾಗಿ ಹುಲುಕುಂಟೆ ಮಹೇಶ್ ಅವರನ್ನು ಆಯ್ಕೆ ಮಾಡಲಾಯಿತು.

# ಶಾಲೆ-ಆಸ್ಪತ್ರೆ ವೈಭವೀಕರಣದಿಂದ ಅಭಿವೃದ್ಧಿ

(1ನೇ ಪುಟದಿಂದ) ಬದಲಾಗಿ ಜೀವನದಲ್ಲಿ ಮಾನವೀಯತೆ ಗುಣಗಳನ್ನು ಅಳವಡಿಸಿಕೊಂಡು ದೊಡ್ಡತನವನ್ನು ತೋರ್ಪಡಿಸಬೇಕಾಗಿದೆ. ಯಾವ ದೇಶ ಮಾನವೀಯತೆಯ ಗುಣಗಳನ್ನು ಅಳವಡಿಸಿಕೊಂಡಿದೆಯೋ ಆ ದೇಶ ಪ್ರಪಂಚದಲ್ಲಿ ಉನ್ನತ ಸ್ಥಾನವನ್ನೇರಲಿದೆ ಎಂದು ಹೇಳಿದರು.

ಕುವೆಂಪುರವರು ಮೌಢ್ಯತೆಗಳನ್ನು ನಿರ್ಮೂಲನೆ ಮಾಡಲು ಹಲವಾರು ವೈಚಾರಿಕ ಕಾದಂಬರಿ, ಕಾವ್ಯ ಹಾಗೂ ವಿಮರ್ಶೆಗಳನ್ನು ರಚಿಸಿದರೂ ಸಹ ಪೋಷಕರು ಮಕ್ಕಳನ್ನು ಮೌಢ್ಯತೆ ಕಡೆಗೆ ತಳ್ಳುತ್ತಿರುವುದು ವಿಪರ್ಯಾಸದ ಸಂಗತಿಯಾಗಿದೆ ಎಂದರು.

ಡಿಸಿ ಎಂ.ವಿ. ವೆಂಕಟೇಶ್ ಮತನಾಡಿ ಕುವೆಂಪು ರವರು ನಮ್ಮ ರಾಜ್ಯ ಹಾಗೂ ದೇಶ ಕಂಡ ಶ್ರೇಷ್ಠ ಕವಿ. ಕನ್ನಡ ಭಾಷೆ, ಕನ್ನಡ ನಾಡು ಹಾಗೂ ಕನ್ನಡಿಗರಿಗೆ ಸಾಹಿತ್ಯದ ಮೂಲಕ ಅದ್ಭುತ ಕೊಡುಗೆ ನೀಡಿದ್ದಾರೆ ಎಂದರು.

ಮೊಟ್ಟ ಮೊದಲನೇ ಜ್ಞಾನಪೀಠ ಪ್ರಶಸ್ತಿಯು ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ಮಹಾ ಕಾವ್ಯಕ್ಕೆ ಸಂದಿರುವುದು ಕನ್ನಡ ಸಾಹಿತ್ಯದ ಹಿರಿಮೆಯಾಗಿದೆ. ಇವರು ರಚಿಸಿರುವಂತಹ ಕಾವ್ಯ, ಕೃತಿ, ನಾಟಕ, ವಿಮರ್ಶೆಗಳಲ್ಲಿ ವಿಜ್ಞಾನ, ತತ್ವಜ್ಞಾನ, ಮನೋವಿಜ್ಞಾನ ಹಾಗೂ ಜೀವ ವಿಜ್ಞಾನವನ್ನು ಕಾಣಬಹುದು ಎಂದರು.

ಪಾಲಿಕೆಯ ಉಪ ಮಹಾಪೌರರಾದ ಯಶೋಧ ಹೆಗ್ಗಪ್ಪ, ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ವಾಮದೇವಪ್ಪ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್. ಷಣ್ಮುಖಪ್ಪ, ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ರಾಘವೇಂದ್ರ ಪ್ರಸಾದ್, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಕರಿಸಿದ್ದಪ್ಪ, ಹಿರಿಯ ಪತ್ರಕರ್ತ ಬಿ.ಎನ್ ಮಲ್ಲೇಶ್, ಆವರಗೆರೆ ರುದ್ರಮುನಿ ಮತ್ತಿತರರು ಉಪಸ್ಥಿತರಿದ್ದರು.

# ಮನೆಗಳ ನಿರ್ಮಾಣ: ಪ್ರಹ್ಲಾದ್ ಜೋಷಿ

(1ನೇ ಪುಟದಿಂದ)'ನಮೋ ದ್ರೋಣ್ ದೀದಿ' ಎಂದು ಹೆಸರಿಸಲಾಗಿದೆ. ಈ ದ್ರೋಣ್ ಸಹಾಯದಿಂದ ನ್ಯಾನೋ ಯೂರಿಯಾವನ್ನು ದಿನಕ್ಕೆ 100 ಎಕರೆಗೆ ಸಿಂಪರಣೆ ಮಾಡಬಹುದಾಗಿದೆ.

ಈ ಯೋಜನೆ ದೇಶದಲ್ಲಿ ಬಹುದೊಡ್ಡ ಬದಲಾವಣೆ ತರಲಿದೆ ಎಂದರು.

ದಾವಣಗೆರೆ ಸಂಸದ ಡಾ.ಜಿ.ಎಂ.ಸಿದ್ದೇಶ್ವರ ಮಾತನಾಡಿ, ಕಳೆದ 10 ವರ್ಷಗಳಲ್ಲಿ ಕೇಂದ್ರ ಸರ್ಕಾರ ಕೈಗೊಂಡಿರುವ ಜನಕಲ್ಯಾಣ ಕಾರ್ಯಕ್ರಮಗಳಿಂದ ದೇಶದ ಅಭಿವೃದ್ಧಿಯ ಚಿತ್ರಣ ಬದಲಾಗಿದೆ ಎಂದರು.

ಉಜ್ವಲ 2.0 ಯೋಜನೆ ಅಡಿಯಲ್ಲಿ ರಾಜ್ಯದಲ್ಲಿ ಮತ್ತೆ ನಾಲ್ಕು ಲಕ್ಷ ಕುಟುಂಬಗಳಿಗೆ ಉಚಿತ ಅಡುಗೆ ಅನಿಲ ಸಿಲಿಂಡರ್ ವಿತರಣೆ ಮಾಡಲಾಗುತ್ತಿದೆ ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಹರಿಹರ ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕ ಎಸ್.ವಿ.ರಾಮಚಂದ್ರ, ಮಾಜಿ ಮುಖ್ಯ ಸಚೇತಕ ಡಾ.ಎ.ಎಚ್.ಶಿವಯೋಗಿ ಸ್ವಾಮಿ, ಲೀಡ್ ಬ್ಯಾಂಕ್ ಮ್ಯಾನೇಜರ್ ಪ್ರಕಾಶ್ ಇತರರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಕೇಂದ್ರ ಸರ್ಕಾರದ ಯೋಜನೆಗಳ ಫಲಾನುಭವಿಗಳಿಗೆ ವಿವಿಧ ಸೌಲಭ್ಯಗಳನ್ನು ಸಚಿವರು ವಿತರಿಸಿದರು. ಸಂಕಲ್ಪಯಾತ್ರೆ ಅಂಗವಾಗಿ ಸಾರ್ವಜನಿಕರಿಗಾಗಿ ಉಚಿತ ಆರೋಗ್ಯ ತಪಾಸಣೆ ಆಯೋಜಿಸಲಾಗಿತ್ತು.

## ಮಾನ್ಯ ನಾಲ್ಕನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ದಾವಣಗೆರೆ ಇವರ ಘನ ಸನ್ನಿಧಾನದಲ್ಲಿ

**ಓ.ಎಸ್.ನಂ.758/2014**

**ವಾದಿಯರು: ಶ್ರೀಮತಿ ಹೆಚ್.ಜೆ. ನಿರ್ಮಲ ಕೋಂ ಲೇಟ್ ಹೆಚ್.ಎಸ್.ಜಗದೀಶ್, ವಯಸ್ಸು 70 ವರ್ಷ, ವಾಸ:ಡೋ.ನಂ.429/1, ಬ್ಯಾಡಗಿ ಶೆಟ್ರು ಸ್ಕೂಲ್ ಎದುರು, ಪಿ.ಜೆ.ಬಡಾವಣೆ, ದಾವಣಗೆರೆ ಹಾಗೂ ಇನ್ನೊಬ್ಬರು -ವಿರುದ್ಧ-**

**ಪ್ರತಿವಾದಿಯರು: 1. ಶ್ರೀಮತಿ ಹೆಚ್.ಜೆ.ಶಕುಂತಲಮ್ಮ ಕೋಂ ಲೇಟ್ ಹೆಚ್.ಜಯಣ್ಣ ಮೃತಳ ವಾರಸುದಾರರು ಮತ್ತು ಇತರರು**

**1(ಎ) ಎಸ್.ಎಸ್.ಹನಗೋಡಿಮಠ್ ಬಿನ್ ಸಂಗಯ್ಯ ಮೃತ ವಾರಸುದಾರರು**
**1(ಎ)(i) ಹೆಚ್.ಎಸ್. ವೀರಣ್ಣ ಬಿನ್ ಎಸ್.ಎಸ್.ಹನಗೋಡಿಮಠ್, ವಯಸ್ಸು 63 ವರ್ಷ**
**1(ಎ)(ii) ಹೆಚ್.ಎಸ್. ಮುರುಗೇಶ್ ಬಿನ್ ಎಸ್.ಎಸ್.ಹನಗೋಡಿಮಠ್, ವಯಸ್ಸು 61 ವರ್ಷ**
**1(ಎ)( iii) ಹೆಚ್.ಎಸ್. ಸಂಗಮೇಶ್ ಬಿನ್ ಎಸ್.ಎಸ್.ಹನಗೋಡಿಮಠ್, ವಯಸ್ಸು 59 ವರ್ಷ**
**1(ಎ)( iv) ಹೆಚ್.ಎಸ್. ವಾಗೀಶ್ ಬಿನ್ ಎಸ್.ಎಸ್.ಹನಗೋಡಿಮಠ್, ವಯಸ್ಸು 58 ವರ್ಷ**
**1(ಎ)(V) ಶ್ರೀಮತಿ ಸುಮ ಬಿನ್ ಎಸ್.ಎಸ್.ಹನಗೋಡಿಮಠ್, ವಯಸ್ಸು 56 ವರ್ಷ**
**ಎಲ್ಲರು ವಾಸ: ಡೋ.ನಂ.281/2, 3ನೇ ಮೇನ್, ಪಿ.ಜೆ.ಬಡಾವಣೆ, ದಾವಣಗೆರೆ-577002**

**ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 5, ನಿಯಮ 20-ಎ ರಡಿಯಲ್ಲಿ ಪ್ರತಿವಾದಿ ನಂ. 1(ಎ) (i), 1(ಎ) (ii), 1(ಎ) (iii), 1(ಎ) (iv), 1(ಎ) (V) ಇವರಿಗೆ ಹೊರಡಿಸಲಾದ ಪತ್ರಿಕಾ ಸಮನ್ಸ್ ಏನೆಂದರೇ**

ಮೇಲ್ಕಂಡ ವಾದಿಯರು ನಿಮ್ಮ ವಿರುದ್ಧ ಮಾನ್ಯ ನ್ಯಾಯಾಲಯದಲ್ಲಿ 3ನೇ ಪ್ರತಿವಾದಿಯು 4ನೇ ಪ್ರತಿವಾದಿಯ ಹೆಸರಿಗೆ ದಾವಣಗೆರೆ ಸಬ್ ರಿಜಿಸ್ಟ್ರಾರ್ ರವರ ಕಛೇರಿಯಲ್ಲಿ ದಿನಾಂಕ:02.07.2012 ರಂದು ಡಾಕ್ಯುಮೆಂಟ್ ನಂ.ಡಿವಿಜಿ-1-04073-2012-13, ಸಿಡಿ ನಂ.ಡಿವಿಜಿಡಿ 269 ರ ನೋಂದಾಯಿತ ಕ್ರಯಪತ್ರ ಮತ್ತು ದಿನಾಂಕ:16.10.2012 ರಂದು ಡಾಕ್ಯುಮೆಂಟ್ ನಂ.ಡಿವಿಜಿ-1-09411-2012-13, ಸಿಡಿ ನಂ. ಡಿವಿಜಿಡಿ 278 ರಂತೆ ಆಗಿರುವ ತಿದ್ದುಪಡಿ ಪತ್ರ ಗಳು ದಾವಾ 'ಎ' ಷೆಡ್ಯೂಲ್ ಸೊತ್ತುಗಳಲ್ಲಿ ವಾದಿಯರ ಹಿಸ್ಸೆಗೆ ಯಾವುದೇ ರೀತಿಯಲ್ಲಿ ಬಾಂಧಾಯಿಸುವುದಿಲ್ಲವೆಂತ ಘೋಷಿಸುವಂತೆಯೂ

1ನೇ ಪ್ರತಿವಾದಿಯು 2ನೇ ಪ್ರತಿವಾದಿಯ ಹೆಸರಿಗೆ ದಾವಣಗೆರೆ ಸಬ್ ರಿಜಿಸ್ಟ್ರಾರ್ ರವರ ಕಛೇರಿಯಲ್ಲಿ ದಿನಾಂಕ: 20.08.2014 ರಂದು ಡಾಕ್ಯುಮೆಂಟ್ ನಂ.ಡಿವಿಜಿ-1-07946-2014-15, ಸಿಡಿ ನಂ.ಡಿವಿಜಿಡಿ 345 ರ ನೋಂದಾಯಿತ ಕ್ರಯಪತ್ರ ಮತ್ತು ದಿನಾಂಕ:20.08.2014 ರಂದು ಡಾಕ್ಯುಮೆಂಟ್ ನಂ.ಡಿವಿಜಿ-1-07949- 2014-15, ಸಿಡಿ ನಂ.ಡಿವಿಜಿಡಿ 345ರಂತೆ ಆಗಿರುವ ನೋಂದಾಯಿತ ದೃಢೀಕರಣ ಪತ್ರ ಗಳು ದಾವಾ 'ಎ' ಷೆಡ್ಯೂಲ್ ಸೊತ್ತುಗಳಲ್ಲಿ ವಾದಿಯರ ಹಿಸ್ಸೆಗೆ ಯಾವುದೇ ರೀತಿಯಲ್ಲಿ ಬಾಂಧಾಯಿಸುವುದಿಲ್ಲವಂತ ಘೋಷಿಸುವಂತೆಯೂ;

ವಾದಿಯರ ದಾವಾ 'ಎ' ಷೆಡ್ಯೂಲ್ ಸೊತ್ತಿನ ಶಾಂತತಾ ಸ್ವಾಧೀನ ಮತ್ತು ಅನುಭವಕ್ಕೆ ಪ್ರತಿವಾದಿಯರಾಗಲೀ ಅಥವಾ ಅವರ ಪರವಾಗಿ ಕ್ಲೇಮು ಮಾಡುವವರಾರೇ ಆಗಲೀ ಅವರನ್ನು ಶಾಶ್ವತ ನಿರ್ಬಂಧಕಾಜ್ಞೆ ಹೊರಡಿಸುವ ಮೂಲಕ ತಡೆಯುವಂತೆ ಕೋರಿ ತೀರ್ಪು ಮತ್ತು ಡಿಕ್ರಿ ಮಾಡುವಂತೆಯೂ ಮತ್ತು ಇತರೆ ಸಂದರ್ಭೋಚಿತ ಆದೇಶಗಳನ್ನು ಮಾಡುವಂತೆಯೂ ಕೋರಿ ದಾವೆಯನ್ನು ಹೂಡಿರುತ್ತಾರೆ.

ಮಾನ್ಯ ನ್ಯಾಯಾಲಯವು ದಾವೆಯನ್ನು ದಾಖಲಿಸಿಕೊಂಡು ತಮಗೆ ಅನೇಕ ಬಾರಿ ನೋಟಿಸನ್ನು ಹೊರಡಿಸಿದರೂ ತಾವು ಉದ್ದೇಶಪೂರ್ವಕವಾಗಿ ನೋಟಿಸನ್ನು ಸ್ವೀಕರಿಸದೇ ಮುಂದೂಡುತ್ತಾ ಬಂದಿರುತ್ತೀರಿ. ಹೀಗಾಗಿ ವಾದಿಯರು ಸಮನ್ಸನ್ನು ಪತ್ರಿಕಾ ಪ್ರಕಟಣೆಯ ಮೂಲಕ ಹೊರಡಿಸಲು ಕೋರಿಕೊಂಡಂತೆ ತಮಗೆ ಈ ಪತ್ರಿಕಾ ಸಮನ್ಸನ್ನು ಹೊರಡಿಸಲಾಗಿದೆ.

ಪ್ರಕರಣವನ್ನು ತಮ್ಮ ಹಾಜರಾತಿಗಾಗಿ ದಿನಾಂಕ:30.01.2024 ರಂದು ಮುದ್ದತ್ತು ನೀಡಿದ್ದು, ಆ ದಿನ ಬೆಳಿಗ್ಗೆ 11 ಗಂಟೆಗೆ ತಾವಾಗಲೀ, ತಮ್ಮ ವಕೀಲರ ಮೂಲಕವಾಗಲೀ ಮೇಲ್ಕಾಣಿಸಿದ ದಿನ ಹಾಗೂ ಸಮಯ ಹಾಗೂ ನ್ಯಾಯಾಲಯದಲ್ಲಿ ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ ತಮ್ಮ ಗೈರುಹಾಜರಿಯಲ್ಲಿ ಪ್ರಕರಣವನ್ನು ತೀರ್ಮಾನಿಸಲಾಗುವುದು.

ನ್ಯಾಯಾಲಯದ ಮೊಹರು ಮತ್ತು ನನ್ನ ಸಹಿಯೊಂದಿಗೆ ದಿನಾಂಕ:29.12.2023 ರಂದು ನೀಡಲಾಗಿದೆ.

**ಅರ್ಜಿದಾರರ ಪರ ವಕೀಲರು**
**ಸಹಿ/- ಕೆ.ಎನ್. ಏಕಾಂತಪ್ಪ, ವಕೀಲರು,**
**ಎಸ್.ಎಸ್.ಲೇಔಟ್, ಬಿ ಬ್ಲಾಕ್, ದಾವಣಗೆರೆ .**

**ನ್ಯಾಯಾಲಯದ ಆದೇಶಾನುಸಾರ**
**ಸಹಿ/-ಮುಖ್ಯ ಲಿಪಿಕಾಧಿಕಾರಿಗಳು, ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ದಾವಣಗೆರೆ.**

## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ **ರುದ್ರಪ್ಪ ಬಿನ್ ಲೇಟ್ ನಿಂಗಪ್ಪ,** ವಯಸ್ಸು 75 ವರ್ಷ, ವಾಸ: ಹಳೇ ಕುಂದವಾಡ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ ವಾಸಿಯಾದ ಇವರ ಪರವಾಗಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ.

ಈ ಕೆಳಕಂಡ ಷೆಡ್ಯೂಲ್ ಸ್ವತ್ತು ನನ್ನ ಕಕ್ಷಿದಾರರ ಪಿತ್ರಾರ್ಜಿತ ಸ್ವತ್ತಾಗಿರುತ್ತದೆ. ಅಂದರೆ ನನ್ನ ಕಕ್ಷಿದಾರರ ತಾಯಿಯ ತಂದೆ ಆಸ್ತಿಯಾಗಿರುತ್ತದೆ. ನನ್ನ ಕಕ್ಷಿದಾರರ ತಾಯಿಯ ತಂದೆ ಬಾಳೆ ಗಂಗಪ್ಪ ನನ್ನ ಕಕ್ಷಿದಾರರ ಪೂರ್ವಜರಾಗಿರುತ್ತಾರೆ. ಸದರಿ ಬಾಳೆ ಗಂಗಪ್ಪನವರಿಗೆ ಗಂಡು ಸಂತತಿ ಇರಲಿಲ್ಲ. ಅವರಿಗೆ ನಾಲ್ಕು ಜನ ಹೆಣ್ಣು ಮಕ್ಕಳು ಅವರೆಂದರೆ, **1) ಗೌರಮ್ಮ 2) ಸಣ್ಣ ನಿಂಗಮ್ಮ 3) ತುಂಗಮ್ಮ 4) ಗಂಗಮಾಳಮ್ಮ.** ಸಣ್ಣನಿಂಗಮ್ಮ ನನ್ನ ಕಕ್ಷಿದಾರರ ತಾಯಿಯಾಗಿರುತ್ತಾರೆ. ಹೀಗಾಗಿ ಬಾಳೆ ಗಂಗಪ್ಪನವರಿಗೆ ನನ್ನ ಕಕ್ಷಿದಾರರು ಮೊಮ್ಮಗನಾಗಬೇಕು.

ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ಬಾಳೆ ಗಂಗಪ್ಪನವರ ಕಾಲದಿಂದಲೂ ಬಾಳೆ ಗಂಗಪ್ಪನ ವಾರಸುದಾರರು ಜಂಟಿಯಾಗಿ ಅನುಭವಿಸಿಕೊಂಡು ಬಂದಿರುತ್ತಾರೆ ಹಾಗೂ ಸದರಿ ಆಸ್ತಿಯಲ್ಲಿ ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆ ಕೋರಿ ಹಾಗೂ ಇತರೆ ಪರಿಹಾರ ಕೋರಿ ದಾವಣಗೆರೆಯ ಮಾನ್ಯ 3ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ **ಅಸಲು ದಾವಾ ನಂ.235/2023**ನ್ನು ಸಲ್ಲಿಸಿದ್ದು, ಸದರಿ ದಾವೆಯು ಮಾನ್ಯ ನ್ಯಾಯಾಲಯದಲ್ಲಿ ಚಾಲ್ತಿ ಇರುತ್ತದೆ. ಸದರಿ **ದಾವೆ ನಂ.235/2023**ರಲ್ಲಿನ ಪ್ರತಿವಾದಿ ನಂ.54 ಅಂದರೆ ಹೆಚ್.ಬಿ. ಕರಿಬಸಪ್ಪನವರಾಗಲೀ, ಅವರ ಪರ ಮತ್ತ್ಯಾರೇ ಆಗಲೀ ದಾವಾ ಷೆಡ್ಯೂಲ್ ಆಸ್ತಿಯನ್ನು ಸದರಿ ದಾವಾ ಇತ್ಯರ್ಥವಾಗುವವರೆಗೂ ಯಾವುದೇ ರೀತಿ ಪರಭಾರೆ ಮಾಡಬಾರದೆಂದು ಮೇಲ್ಕಂಡ ಗೌರವಾನ್ವಿತ ನ್ಯಾಯಾಲಯದಲ್ಲಿ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವಾಗಿರುತ್ತದೆ.

ಆದ್ದರಿಂದ ಷೆಡ್ಯೂಲ್ ಸ್ವತ್ತಿನ ಸಂಬಂಧ ಸಾರ್ವಜನಿಕರು ಯಾರೇ ಆಗಲೀ ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಪಡೆಯುವುದಾಗಲೀ, ಜಂಟಿ ಅಭಿವೃದ್ಧಿ ಕರಾರು ಮತ್ತು ಯಾವುದೇ ಕರಾರುಗಳನ್ನಾಗಲೀ ಹಾಗೂ ವ್ಯವಹಾರವನ್ನಾಗಲೀ ಮಾಡಬಾರದೆಂದು ಈ ಮೂಲಕ ತಿಳಿಯಪಡಿಸಲಾಗಿದೆ. ಒಂದು ವೇಳೆ ಸಾರ್ವಜನಿಕರು ಯಾರೇ ಆಗಲಿ ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾವುದೇ ರೀತಿ ವ್ಯವಹಾರ ಮಾಡಿದಲ್ಲಿ ಸದರಿ ವ್ಯವಹಾರವು ನನ್ನ ಕಕ್ಷಿದಾರರ ಹಾಗೂ ಬಾಳೆ ಗಂಗಪ್ಪ, ಇತರೆ ವಾರಸುದಾರರ ಹಕ್ಕಿಗೆ ಯಾವುದೇ ಬಂಧನಕಾರಿಯಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

**ಷೆಡ್ಯೂಲ್ :** ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಕುಂದುವಾಡ ಗ್ರಾಮದ ರಿ.ಸ.ನಂ. 155/1ರಲ್ಲಿನ ಒಟ್ಟು ವಿಸ್ತೀರ್ಣ 6ಎಕರೆ 09 ಗುಂಟೆ ಪೈಕಿ, 0-14 ಗುಂಟೆ ಖರಾಬು ವಜಾ ಜಾತ, 5 ಎಕರೆ 35 ಗುಂಟೆ ಜಮೀನಿಗೆ **ಚಕ್ಕುಬಂದಿ : ಪೂರ್ವಕ್ಕೆ :** ಸ.ನಂ.156 ಖಾತೆದಾರರ ಜಮೀನು ಮತ್ತು ಹಳೇ ಕುಂದುವಾಡ ಗ್ರಾಮ, **ಪಶ್ಚಿಮಕ್ಕೆ :** ಬಾತಿ ರಸ್ತೆ, **ಉತ್ತರಕ್ಕೆ :** ರಿ.ಸ.ನಂ.163ರ ಖಾತೆದಾರರ ಜಮೀನು, **ದಕ್ಷಿಣಕ್ಕೆ :** ರಿ.ಸ.ನಂ.155/2 ರ ಜಮೀನು.

**ಕಕ್ಷಿದಾರರ ಸಹಿ**

ಕಕ್ಷಿದಾರರ ಪರ ವಕೀಲರು
**ಕೆ.ಹೆಚ್. ಧನಂಜಯ,**
ವಕೀಲರು ರೋಲ್ ನಂ. KAR/738/98
#4884/7, 1ನೇ ಮಹಡಿ, ಶಾಮನೂರು ರಸ್ತೆ, ಬಾಟಲಿ ಬಿಲ್ಡಿಂಗ್ ಹತ್ತಿರ,
ಎಸ್.ಎಸ್. ಲೇಔಟ್ ಎ ಬ್ಲಾಕ್, ದಾವಣಗೆರೆ - 577004.
Cell : 94487 27238, email : khd.adv@gmailcom



## ಸ್ವಸ್ಥ ಸಮಾಜ ನಿರ್ಮಾಣಕ್ಕೆ ಸದೃಢ ಆರೋಗ್ಯ ಮುಖ್ಯ

### ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ಅಭಿಮತ

ದಾವಣಗೆರೆ, ಡಿ. 29- ಸದೃಢ ಆರೋಗ್ಯದಿಂದ ಸ್ವಸ್ಥ ನಿರ್ಮಾಣ ಸಾಧ್ಯ. ಪ್ರತಿಯೊಬ್ಬರೂ ಸಹ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸುವ ಅಗತ್ಯವಿದೆ ಎಂದು ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ಹೇಳಿದರು.

ನಗರದ ಸರ್ಕಾರಿ ನೌಕರರ ಸಮುದಾಯ ಭವನದಲ್ಲಿ ಜಿಲ್ಲಾ ಸರ್ಕಾರಿ ನೌಕರರ ಸಂಘ, ಸಂಕಲ್ಪ ಸೇವಾ ಫೌಂಡೇಶನ್, ಸಿಟಿ ಸೆಂಟ್ರಲ್ ಹಾಸ್ಪಿಟಲ್ ಹಾಗೂ ಡಾ. ಅಗರ್‌ವಾಲ್ಸ್ ಕಣ್ಣಿನ ಆಸ್ಪತ್ರೆ, ದಾವಣಗೆರೆ ನೇತ್ರಾಲಯದ ಸಹಯೋಗಲ್ಲಿ ಇಂದು ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರದ ಸಮಾರಂಭದಲ್ಲಿ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಿ ಮಾತನಾಡಿದರು.

ಉಚಿತ ಆರೋಗ್ಯ ಶಿಬಿರವು ಸಾರ್ವಜನಿಕರು ಮತ್ತು ಸರ್ಕಾರಿ ನೌಕರರಿಗೆ ಹೆಚ್ಚು ಉಪಯುಕ್ತವಾಗಿದ್ದು, ಇದೊಂದು ಸಮಾಜಮುಖಿ ಕೆಲಸವಾಗಿದ್ದು, ಸರ್ಕಾರಿ ನೌಕರರ ಸಂಘದ ಕಾರ್ಯ ಚಟುವಟಿಕೆಗಳು ಶ್ಲಾಘನೀಯ ಎಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಸಿಟಿ ಸೆಂಟ್ರಲ್ ಹಾಸ್ಪಿಟಲ್ ಮುಖ್ಯಸ್ಥ ಡಾ. ಹೆಚ್.ಎಂ. ಸುಬ್ಬಾರಾವ್ ಮಾತನಾಡಿ, ನಿತ್ಯ ನಿಯಮಿತ ವ್ಯಾಯಾಮ, ಉತ್ತಮ ಜೀವನ ಶೈಲಿ ರೂಢಿಸಿಕೊಂಡರೆ ರೋಗಮುಕ್ತ ಜೀವನ ನಡೆಸಲು ಸಾಧ್ಯವಿದೆ ಎಂದು ಹೇಳಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್. ಷಣ್ಮುಖಪ್ಪ ಮಾತನಾಡಿ, 40 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರೂ ಆಗಾಗ್ಗೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವ ಮೂಲಕ ಉತ್ತಮ ಆರೋಗ್ಯ ಹೊಂದುವಂತೆ ಸಲಹೆ ನೀಡಿದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ವೀರೇಶ್ ಎಸ್. ಒಡೇನಪುರ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಡಾ.ನಿತೀಶ್ ಕೊಟ್ರಪ್ಪ, ಡಾ. ಅಗರ್‌ವಾಲ್ಸ್ ಕಣ್ಣಿನ ಆಸ್ಪತ್ರೆಯ ಆಡಳಿತಾಧಿಕಾರಿ ಸುಹೀಲ್ ಅದ್ವಾನಿ, ಸರ್ಕಾರಿ ನೌಕರರ ಸಂಘದ ಜಿಲ್ಲಾ ಕಾರ್ಯದರ್ಶಿ ಸಿ. ಗುರುಮೂರ್ತಿ, ಜಿಲ್ಲಾ ಖಜಾಂಚಿ ಬಿ.ಆರ್. ತಿಪ್ಪೇಸ್ವಾಮಿ, ರಾಜ್ಯ ಪರಿಷತ್ ಸದಸ್ಯೆ ಮಂಜಮ್ಮ, ಕಾರ್ಯಾಧ್ಯಕ್ಷ ಬಿ. ಪಾಲಾಕ್ಷಿ, ಗೌರವಾಧ್ಯಕ್ಷ ಸಿ. ತಿಪ್ಪೇಸ್ವಾಮಿ, ರಾಜ್ಯ ಸಂಘಟನಾ ಕಾರ್ಯದರ್ಶಿ ಶಿವಾನಂದ ದಳವಾಯಿ, ಕೆ.ಎಂ.ಹೆಚ್. ಸ್ವಾಮಿ, ಬಿ. ಮಂಜುನಾಥ್ ಮತ್ತು ಮತ್ತಿತರರು ಉಪಸ್ಥಿತರಿದ್ದರು. ಬಿ.ಆರ್. ತಿಪ್ಪೇಸ್ವಾಮಿ ಸ್ವಾಗತಿಸಿದರು. ಮಲ್ಲಿಕಾರ್ಜುನಯ್ಯ ನಿರೂಪಿಸಿದರು.

## ಬಂಧಿತರ ಬಿಡುಗಡೆಗೆ ಆಗ್ರಹಿಸಿ ಕರವೇ ಉರುಳು ಸೇವೆ



ದಾವಣಗೆರೆ, ಡಿ.29- ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯ ಅಧ್ಯಕ್ಷ ನಾರಾಯಣಗೌಡ ಅವ ರನ್ನು ಬಿಡುಗಡೆಗೊಳಿಸಬೇಕೆಂದು ಆಗ್ರಹಿಸಿ ಪಾಲಿಕೆ ಮುಂಭಾಗದಿಂದ ಉಪವಿಭಾಗಾಧಿಕಾರಿ ಗಳ ಕಚೇರಿವರೆಗೂ ಕರವೇ ಜಿಲ್ಲಾಧ್ಯಕ್ಷ ಎಂ. ಎಸ್.ರಾಮೇಗೌಡ, ಯುವ ಘಟಕದ ಅಧ್ಯಕ್ಷ ಗೋಪಾಲ್ ದೇವರಮನೆ, ಜಿಲ್ಲಾ ಸಂಚಾಲಕ ಖಾದರ್ ಭಾಷಾ, ಜಿಲ್ಲಾ ಉಪಾಧ್ಯಕ್ಷ ಗಿರೀಶ್ ಕುಮಾರ್, 13ನೇ ವಾರ್ಡಿನ ಅಧ್ಯಕ್ಷ ತನ್ವೀರ್, ದಕ್ಷಿಣ ವಿಧಾನಸಭಾ ಉಪಾಧ್ಯಕ್ಷ ತಮನ್ನ ರಫೀಕ್ ಮತ್ತಿತರರು ಇಂದು ಉರುಳಿ ಸೇವೆ ನಡೆಸಿದರು.

ವೇದಿಕೆಯ ರಾಜ್ಯಾಧ್ಯಕ್ಷ ಟಿ.ಎ. ನಾರಾಯಣ ಗೌಡ ಮತ್ತು 53 ಕಾರ್ಯಕರ್ತರನ್ನು ಬಂಧನ ಮಾಡುವ ಮೂಲಕ ರಾಜ್ಯ ಸರ್ಕಾರ ಕನ್ನಡ ನಾಡಿಗೆ ಮತ್ತು ಕನ್ನಡಿಗರಿಗೆ ದ್ರೋಹ ಎಸಗಿದೆ ಎಂದು ರಾಮೇಗೌಡ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಾಮಫಲಕಗಳು ಶೇ. 60ರಷ್ಟು ಕನ್ನಡದಲ್ಲಿಯೇ ಇರಬೇಕೆಂದು ಸರ್ಕಾರ ಆದೇಶ ಮಾಡಿದ್ದರೂ ಸಹ, ಸರಿಯಾದ ಕ್ರಮಕೈಗೊಳ್ಳದೇ ಇರುವುದರಿಂದ ಸರ್ಕಾರ ಮಾಡಬೇಕಾದ ಕೆಲಸವನ್ನು, ಆಂಗ್ಲ ನಾಮ ಫಲಕಗಳಿಗೆ ಮಸಿ ಬಳಿ ಯುವ ಮತ್ತು ತೆರವುಗೊಳಿಸುವ ಕೆಲಸ ವನ್ನು ಕರ್ನಾಟಕ ರಕ್ಷಣಾ ವೇದಿಕೆ ಮಾಡಿದೆ.

ಕನ್ನಡಿಗರ ಸರ್ಕಾರ ಕನ್ನಡದ ಪರವಾಗಿ ನಿಲುವುಗಳನ್ನು ಪ್ರಕಟಿಸುತ್ತೇವೆಂದು ಹೇಳುವ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕನ್ನಡ ಕಾರ್ಯಕರ್ತರ ಮೇಲೆ ಹಾಕಲಾಗಿರುವ ಕೇಸುಗಳನ್ನು ವಾಪಸ್ ಪಡೆಯಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ರಾಜ್ಯದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಾಗೂ ಕನ್ನಡ ಕಾವಲು ಸಮಿತಿ ಸಂಪೂರ್ಣ ನಿಷ್ಕ್ರಿಯಗೊಂಡಿವೆ, ಕನ್ನಡದ ಪರವಾಗಿ ಒಂದು ಕೆಲಸ ಮಾಡುತ್ತಿಲ್ಲ ಇಂಥ ನಿಗಮಗಳನ್ನು ವಿಸರ್ಜಿಸಬೇಕು.

ಮಹಾರಾಷ್ಟ್ರದಲ್ಲಿ ಮರಾಠಿ ಭಾಷೆಗಾಗಿ ಹೋರಾಟ ಮಾಡುವ ಹೋರಾಟಗಾರರಿಗೆ ಸರ್ಕಾರವೇ ಅನುದಾನ ನೀಡಿ ಸಂಪೂರ್ಣ ಸಹಕಾರ ನೀಡುತ್ತದೆ. ಅದೇ ರೀತಿ ತಮಿಳುನಾಡಲ್ಲಿ ತಮಿಳು ಭಾಷೆಗೆ ಹೆಚ್ಚಿನ ಆದ್ಯತೆ ಇದೆ. ಆದರೆ ನಮ್ಮ ರಾಜ್ಯ ಸರ್ಕಾರ ಕನ್ನಡಪರ ಹೋರಾಟಗಾರರನ್ನು ಕೇಸುಗಳು ಹಾಕುವ ಮೂಲಕ ಜೈಲಿಗೆ ಕಳಿಸುವ 'ಪ್ರಶಸ್ತಿ'ಯನ್ನು ನೀಡುವ ಕೆಲಸ ಮಾಡುತ್ತದೆ. ಇಂಥ ಕನ್ನಡ ದ್ರೋಹದ ಕೆಲಸ ಮತ್ತೊಂದಿಲ್ಲ ಎಂದು ಕರವೇ ತಿಳಿಸಿದೆ.

ಈ ಸಂದರ್ಭದಲ್ಲಿ ಜಿಲ್ಲಾ ಉಪಾಧ್ಯಕ್ಷ ಮಂಜುಶ್ರೀ ಗೌಡ, ಜಿ.ಎಸ್ ಸಂತೋಷ್, ಕೆ.ಜಿ ಬಸವರಾಜ್, ಮಲ್ಲಿಕಾರ್ಜುನ್, ಎಂ.ಡಿ ರಫೀಕ್, ನಾಗರಾಜ್ ಮೆಹರ್‌ವಾಡೆ, ಮಹಿಳಾ ಜಿಲ್ಲಾ ಘಟಕದ ಅಧ್ಯಕ್ಷರಾದ ಶ್ರೀಮತಿ ಬಸಮ್ಮ, ಮಂಜುಳಾ ಮಹಾಂತೇಶ್, ಸಾಕಮ್ಮ, ಮಂಜುಳಾ ಗಣೇಶ್, ಆಲೂರು ನಾಗಮ್ಮ, ಶಶಿಕಲಾ, ಶ್ರೀಮತಿ ಮೆಹಬೂಬಾ, ಮಂಜುನಾಥ್, ಪರಮೇಶ್, ಸುರೇಶ್, ಮುಸ್ತಫಾ, ಅಕ್ಷಯ್, ಶ್ರೀನಿವಾಸ್, ದಾದಾಪೀರ್, ಮೋಹನ್, ರಮೇಶ್ ಮತ್ತಿತರರು ಪಾಲ್ಗೊಂಡಿದ್ದರು

## ಆಗ್ನೇಯ ಕ್ಷೇತ್ರದ ಚುನಾವಣೆ : ಇಂದು ಸಂಪರ್ಕ ಕಚೇರಿ ಉದ್ಘಾಟನೆ

ದಾವಣಗೆರೆ, ಡಿ. 29- ಆಗ್ನೇಯ ಶಿಕ್ಷಕರ ಕ್ಷೇತ್ರದ ಚುನಾವಣಾ ಪ್ರಚಾರದ ಹಿನ್ನೆಲೆಯಲ್ಲಿ ನಾಳೆ ದಿನಾಂಕ 30 ರ ಶನಿವಾರ ಬೆಳಿಗ್ಗೆ 11.30 ಕ್ಕೆ ನಗರದ ಡಿಡಿಪಿಐ ಕಚೇರಿ ಸಮೀಪದ ಮುಸ್ಲಿಂ ಹಾಸ್ಟೆಲ್‌ನ ವಾಣಿಜ್ಯ ಸಂಕೀರ್ಣದ ಮಳಿಗೆಯಲ್ಲಿ ಮತದಾರರ ಸಂಪರ್ಕ ಕಚೇರಿಯನ್ನು ಉದ್ಘಾಟಿಸಲಾಗುವುದು ಎಂದು ಪಕ್ಷೇತರ ಅಭ್ಯರ್ಥಿ ಎನ್.ಇ. ನಟರಾಜ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ನಿಕಟಪೂರ್ವ ರಾಜ್ಯಾಧ್ಯಕ್ಷ ಮಹಾದೇವಯ್ಯ ಮಠಪತಿ ಕಚೇರಿ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಡಾ. ಸುಧೀರ್ ರಾಯಸಮ್ ಆಗಮಿಸಲಿದ್ದಾರೆ.

ಕಾರ್ಯಕ್ರಮದ ನಂತರ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ನಡೆಸಲಾಗುವುದು ಎಂದು ಮಾಹಿತಿ ನೀಡಿದರು.

ಜೂನ್- 2024 ರಂದು ನಡೆಯುವ ಆಗ್ನೇಯ ಶಿಕ್ಷಕರ ಕ್ಷೇತ್ರದ ಅಭ್ಯರ್ಥಿಯಾಗಿರುವ ನಾನು, ಶಿಕ್ಷಕರು, ಉಪನ್ಯಾಸಕರ ಸಮಸ್ಯೆಗಳನ್ನು ಬಗೆಹರಿಸುವ ಪ್ರಯತ್ನಮಾಡುತ್ತೇನೆ ಎಂದರು.

ಟಿ.ಎಸ್. ನಾಗರಾಜ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ರಾಣೇಬೆನ್ನೂರು : ನಾಟಕ

ವಸಂತ ಕಲಾ ನಾಟ್ಯ ಸಂಘ (ದಾವಣಗೆರೆ) ಇವರಿಂದ ಮೇರು ವೃತ್ತಿ ರಂಗಭೂಮಿ ಕಲಾವಿದೆ, ಭಾರತಿ (ದಾವಣಗೆರೆ) ಇವರ ತಂಗಿಯ ಮದುವೆಯ ಸಹಾಯಾರ್ಥವಾಗಿ ನಗರಸಭೆ ಟೌನ್‌ಹಾಲ್‌ನಲ್ಲಿ ನುರಿತ ನಟ - ನಟಿಯರಿಂದ ಇಂದು ಸಂಜೆ 6.30 ಕ್ಕೆ 'ಬಸ್ ಕಂಡಕ್ಟರ್ ಅರ್ಥಾತ್ ಖಾನಾವಳಿ ಚೆನ್ನಿ' ಎಂಬ ಕಾಮಿಡಿ ನಾಟಕ ಒಂದೇ ಒಂದು ಪ್ರದರ್ಶನ ನಡೆಯಲಿದೆ.

## ಜ. 13 ರಂದು ವಾಜಪೇಯಿ ಜಯಂತಿ



ದಾವಣಗೆರೆ,ಡಿ 29- ಬಿಜೆಪಿ ಮೂಲ ಕಾರ್ಯಕರ್ತರ ವೇದಿಕೆ ಹಾಗೂ ಅಟಲ್ ಬಿಹಾರಿ ವಾಜಪೇಯಿ ಅಭಿಮಾನಿ ಬಳಗದ ವತಿಯಿಂದ ಜನವರಿ 13 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಅಕ್ಕಮಹಾದೇವಿ ಕಲ್ಯಾಣ ಮಂಟಪದಲ್ಲಿ ಎ.ಬಿ. ವಾಜಪೇಯಿ ಜಯಂತಿಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಬಳಗದ ಅಧ್ಯಕ್ಷ ಎಂ.ಪಿ. ಕೃಷ್ಣಮೂರ್ತಿ ಪವಾರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.


ಕಾರ್ಯಕ್ರಮದಉದ್ಘಾಟನೆಗೆರಾಜ್ಯನಾಯಕರನ್ನುಆಹ್ವಾನಿಸಲಾಗುವುದು. ಉಳಿದಂತೆ ಮಾಜಿ ಸಚಿವರು, ಮಾಜಿ ಶಾಸಕರು, ಜನಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದ ಅವರು, ಹಲವು ವಿಚಾರಗಳ ಕುರಿತು ತಜ್ಞರು ಉಪನ್ಯಾಸ ನೀಡಲಿದ್ದಾರೆ ಎಂದು ಮಾಹಿತಿ ನೀಡಿದರು.

ಜನವರಿ 22 ರಂದು ಅಯೋಧ್ಯೆಯಲ್ಲಿ ನಡೆಯಲಿರುವ ರಾಮ ಮಂದಿರ ಉದ್ಘಾಟನೆ ಹಿನ್ನೆಲೆಯಲ್ಲಿ ಪೂರ್ವಭಾವಿ ಸಭೆಯಾಗಿ ರಾಮಜ್ಯೋತಿ ಯಾತ್ರೆಯಲ್ಲಿ ಹುತಾತ್ಮರಾದ 8 ಕುಟುಂಬಗಳಿಗೆ ಮತ್ತು ಕರಸೇವೆ ವೇಳೆ ಜೈಲಿಗೆ ಹೋಗಿ ಬಂದ, ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ಗೌರವ ನಿಧಿ ನೀಡಲಾಗುವುದು ಎಂದು ತಿಳಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಕೃಷ್ಣಮೂರ್ತಿ ಪವಾರ್ ಇಲ್ಲವೇ ಹೆಚ್.ಎಸ್. ಲಿಂಗರಾಜ್ ಅವರನ್ನು ನೇಮಕ ಮಾಡಬೇಕೆಂದರು. ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಪಕ್ಷವನ್ನು ಸಂಘಟನೆ ಮಾಡಲು ಮೂಲ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷ ಸಂಘಟನೆ ಬಲಿಷ್ಠಗೊಳಿಸಬೇಕೆಂದರು.

ಪತ್ರಿಕಾಗೋಷ್ಠಿಯಲ್ಲಿ ಜೆ. ಸೋಮನಾಥ್, ಆರ್. ಪ್ರತಾಪ್, ಶಿವಶಂಕರ್, ಹೆಚ್.ಎಸ್. ಲಿಂಗರಾಜ್, ಸರೋಜ ದೀಕ್ಷಿತ್, ಪ್ರಭಾವತಿ ಹಾಲಪ್ಪ, ಮಾಲತೇಶ್ ಗುಪ್ತ, ರೇಣುಕಾ ಬಣಕಾರ್, ಕೃಷ್ಣಮೂರ್ತಿ ದೀಕ್ಷಿತ್, ಬಸವರಾಜ್ ಬಣಕಾರ್, ರಾಮಚಂದ್ರಪ್ಪ, ಬೆಣ್ಣೆ ದೋಸೆ ರವಿಕುಮಾರ್, ಮಟ್ಟಿಕಲ್ಲು ವೀರಭದ್ರಸ್ವಾಮಿ ಮತ್ತಿತರರಿದ್ದರು.

## ಶಾಮನೂರಿನಲ್ಲಿ ಇಂದು ಕಾರ್ತಿಕೋತ್ಸವ



ಶಾಮನೂರಿನ ಶ್ರೀ ಮಾಲಸಾಂಬ ಗಂಗಾಳಮ್ಮ ದೇವಸ್ಥಾನದಲ್ಲಿ ಇಂದು ರಾತ್ರಿ 8.30ಕ್ಕೆ ಕಡೆ ಕಾರ್ತಕೋತ್ಸವ ನಡೆಯಲಿದೆ. ದೇವಿಗೆ ಬಾಳದಿಂಡಿನ ಕದಲಿ ಪೂಜೆಯೊಂದಿಗೆ ಆಯೋಜಿಸಲಾಗಿದೆ ಎಂದು ಸಮಿತಿಯ ಕಾರ್ಯದರ್ಶಿ ಸುರೇಶ್ ಚೌಹಾಣ್ ತಿಳಿಸಿದರು.

## ನಿಟುವಳ್ಳಿಯಲ್ಲಿ ಇಂದು ಕಲಾಯಾನ

ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದ ಶಾಲಾ ವಾರ್ಷಿಕೋತ್ಸವ ಸಮಾರಂಭದಲ್ಲಿ 'ಕಲಾಯಾನ 2023-24' ರಂಗಾಸಕ್ತಿಯ ಅನಾವರಣ ಕಾರ್ಯಕ್ರಮ ಇಂದು ಸಂಜೆ 5 ಗಂಟೆಗೆ ಶಾಲಾ ಆವರಣದಲ್ಲಿ ನಡೆಯಲಿದೆ.

ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ರೂರಲ್ ಡೆವಲಪ್‌ಮೆಂಟ್ ಅಂಡ್ ಪಂಚಾಯತ್ ರಾಜ್ ವಿಶ್ವವಿದ್ಯಾನಿಲಯದ ಉಪಕುಲಪತಿ ಪ್ರೊ. ವಿಷ್ಣುಕಾಂತ್ ಎಸ್. ಚಾಟ್ಪಲ್ಲಿ ಮತ್ತು ಲೋಕಾಯುಕ್ತ ಎಸ್ಪಿ ಎಂ.ಎಸ್. ಕೌಲಾಪುರೆ ಆಗಮಿಸುವರು. ಜಯಣ್ಣ ಹೆಚ್. ಪ್ರಾಸ್ತಾವಿಕ ನುಡಿಗಳನ್ನಾಡುವರು.

### ಓದುಗರ ಪತ್ರ

## ಕತ್ತಲಲ್ಲಿ ಮುಳುಗಿದ ದಾವಣಗೆರೆ



**ಮಾನ್ಯರೇ,**

ದಾವಣಗೆರೆ ಅತೀ ವೇಗವಾಗಿ ಬೆಳೆಯುತ್ತಿರುವ ನಗರವೆಂದು ಹೆಸರು ಬಂದಿದೆ. ಸ್ಮಾರ್ಟ್ ಸಿಟಿ ಹೆಗ್ಗಳಿಕೆಗೂ ಪಾತ್ರವಾಗಿದೆ. ದೇಶದ ವಿವಿಧ ರಾಜ್ಯಗಳಿಂದ ವಿದ್ಯಾರ್ಥಿಗಳು ಇಲ್ಲಿ ಕಲಿಯಲು ಬರುತ್ತಾರೆ. ಆದರೆ, ಕತ್ತಲಾದೊಡನೆ ಇಲ್ಲಿನ ರಸ್ತೆಗಳು ಕುರುಡಾಗುತ್ತವೆ. ಹದಡಿ ರಸ್ತೆ, ಶಾಮನೂರು ರಸ್ತೆ, ಚಿಗಟೇರಿ ಆಸ್ಪತ್ರೆ ಎದುರು, ಮಿಣಿ ಮಿಣಿ ಎನ್ನುವ ಬೀದಿ ದೀಪದ ಬೆಳಕು ಏನೇನೂ ಸಾಲದು. ಯಾರ ಯೋಜನೆಯೋ ತಿಳಿಯದು ತೆಂಗಿನ ಮರಕ್ಕಿಂತ ದೊಡ್ಡ ಕಂಬಗಳ ತುದಿಯಲ್ಲಿ ಸಣ್ಣ ಎಲ್.ಇ.ಡಿ. ಬಲ್ಬ್‌ಗಳಿವೆ. ಹಾಗಾಗಿ ದಾವಣಗೆರೆ ಕತ್ತಲೆ ಕೂಪದಲ್ಲಿದ್ದು, ಜನರು ಕಷ್ಟ ಪಡುವಂತಾಗಿದೆ. ಮಹಾನಗರ ಪಾಲಿಕೆ ಇದರತ್ತ ಗಮನ ಹರಿಸಿ, ಜನರ ಬದುಕಿಗೆ ಬೆಳಕು ಕೊಡುವ ಪುಣ್ಯದ ಕೆಲಸ ಮಾಡಲಿ ಎಂದು ಹಾರೈಸುವೆ.

**- ಡಾ. ಎಸ್. ಶಿಶುಪಾಲ, ದಾವಣಗೆರೆ.**

## ನಗರದಲ್ಲಿ ಇಂದು ಅಯೋಧ್ಯೆ ಶ್ರೀರಾಮ ಮಂದಿರ ಅಭಿಯಾನ



2024, ಜನವರಿ 22 ರಂದು ಹಿಂದೂಗಳ ಐಕ್ಯತೆಯ ಪ್ರತೀಕ, ಭರತ ಭೂಮಿಯ ಪ್ರತಿಷ್ಠೆಯಾದ ಮಾರ್ಯಾದಾ ಪುರುಷೋತ್ತಮ ಪ್ರಭು ಶ್ರೀ ರಾಮ ಮಂದಿರ ಪ್ರಾಣ ಪ್ರತಿಷ್ಠಾಪನೆಯ ಅಂಗವಾಗಿ, ಅಯೋಧ್ಯೆಯಿಂದ ಬಂದಿರುವ ಮಂತ್ರಾಕ್ಷತೆಯನ್ನು ಮನೆ ಮನೆಗೆ ವಿತರಣಾ ಕಾರ್ಯವು ಮಹಾನಗರ ಪಾಲಿಕೆಯ 24ನೇ ವಾರ್ಡಿನ ಹರಳೆಣ್ಣೆ ಕೊಟ್ರಬಸಪ್ಪ ವೃತ್ತದಲ್ಲಿ ಇಂದು ಸಂಜೆ 4.30ಕ್ಕೆ ಮೆರವಣಿಗೆ, ಭಜನೆ, ತಾಳ, ರಾಮನಾಮ ಸಂಕೀರ್ತನ ಮುಖಾಂತರ ಜರುಗಲಿದೆ ಎಂದು ಪಾಲಿಕೆ ಸದಸ್ಯ ಪ್ರಸನ್ನಕುಮಾರ್ ಕೆ. ತಿಳಿಸಿದ್ದಾರೆ.

## ಬಿದ್ದಹನುಮಪ್ಪನಮಟ್ಟಿ ವೀರಾಂಜನೇಯ ದೇವಾಲಯದಲ್ಲಿ ಇಂದು ಕಾರ್ತಿಕೋತ್ಸವ



ಹರಪನಹಳ್ಳಿ ತಾಲ್ಲೂಕಿನ ಕಂಚಿಕೆರೆ - ಅರಸೀಕೆರೆ ರಸ್ತೆಯಲ್ಲಿ ಬರುವ ಶ್ರೀಕ್ಷೇತ್ರ ಬಿದ್ದಹನುಮಪ್ಪನ ಮಟ್ಟಿ ಶ್ರೀ ವೀರಾಂಜನೇಯ ದೇವಸ್ಥಾನದಲ್ಲಿ ಇಂದು ಶುಭ ದಿನದಂದು ಕಡೇ ಕಾರ್ತಿಕೋತ್ಸವವು ಶ್ರೀಕ್ಷೇತ್ರದ ಶ್ರೀ ಬಸವರಾಜ ಗುರೂಜಿಯವರ ಸಾನ್ನಿಧ್ಯದಲ್ಲಿ ಸಂಜೆ 8 ಗಂಟೆಗೆ ಶ್ರೀ ವೀರಾಂಜನೇಯ ಸ್ವಾಮಿಗೆ ಹಿಮಾಲಯದ ಗಂಗಾಜಲ ಪ್ರೋಕ್ಷಿಸಿ ಪೂಜೆ, ನೈವೇದ್ಯ, ಅಭಿಷೇಕ, ಮಹಾಮಂಗಳಾರತಿಯ ಪೂಜಾ ಕಾರ್ಯಕ್ರಮವಿದೆ.

## ನಗರದ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಧನುರ್ಮಾಸದ ಪೂಜೆ

ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಧನುರ್ಮಾಸದ ಪೂಜೆ ನಡೆಯುತ್ತಿದ್ದು, ಬರುವ ಜನವರಿ 15 ರವರೆಗೆ ನಡೆಯಲಿದೆ.

ಇಂದು ಶ್ರೀ ಸಂಕಷ್ಟಹರ ಚತುರ್ಥಿ, ರಾತ್ರಿ 7.30 ಕ್ಕೆ ಶ್ರೀ ಮಹಾಗಣಪತಿ ಪೂಜೆ, ಗಣಹೋಮ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ನಡೆಯುವುದು. ರಾತ್ರಿ 9.06 ಗಂಟೆಗೆ ಚಂದ್ರದರ್ಶನ ನಡೆಯುವುದು.

ದಿನಾಂಕ ಜನವರಿ 11 ರ ಗುರುವಾರ ಎಳ್ಳು ಅಮಾವಾಸ್ಯೆ ಪ್ರಯುಕ್ತ ಶ್ರೀ ನಾಗಲಿಂಗೇಶ್ವರ ದೇವರಿಗೆ ರುದ್ರಾಭಿಷೇಕ, ಮೃತ್ಯುಂಜಯ ಹೋಮ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ. ದಿನಾಂಕ ಫೆಬ್ರವರಿ 16 ರಂದು 26ನೇ ವಾರ್ಷಿಕೋತ್ಸವ ಮತ್ತು ರಥೋತ್ಸವ ನಡೆಯುವುದು.



## ನಿಟುವಳ್ಳಿಯಲ್ಲಿಂದು ಕಾರ್ತಿಕೋತ್ಸವ

ಶ್ರೀ ಆಂಜನೇಯ ಸ್ವಾಮಿಯ ಕಾರ್ತಿಕೋತ್ಸವವು ಇಂದು ಸಂಜೆ ಜರುಗಲಿದೆ. ಜನವರಿ 1ರ ಸೋಮವಾರ ಸಂಜೆ ಶ್ರೀ ಗಣಪತಿ ಮತ್ತು ಶ್ರೀ ಈಶ್ವರ ದೇವರುಗಳ ಕಾರ್ತಿಕೋತ್ಸವ ಹಾಗೂ ಜನವರಿ 2ರ ಮಂಗಳವಾರ ಸಂಜೆ ನಿಟ್ಟುವಳ್ಳಿ ಗ್ರಾಮದೇವತೆ ಶ್ರೀ ದುರ್ಗಾಂಬಿಕೆ ದೇವಿಯ ಕಾರ್ತೋಕೋತ್ಸವ ನಡೆಯಲಿದೆ.

## ಅನಿತಾ ಕೌಲ್ ರಾಜ್ಯಮಟ್ಟದ ಪ್ರಶಸ್ತಿ





ಮಲೇಬೆನ್ನೂರು, ಡಿ.29- ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ಕೊಡಮಾಡುವ 2023ನೇ ಸಾಲಿನ ಅನಿತಾ ಕೌಲ್ (ರಾಜ್ಯದ ನಿವೃತ್ತ ಹಾಗೂ ದಿವಂಗತ ಐಎಎಸ್ ಅಧಿಕಾರಿ) ರಾಜ್ಯಮಟ್ಟದ ಪ್ರಶಸ್ತಿಗೆ ರಾಜನಹಳ್ಳಿ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕ ಕಮದೋಡು ನಾಗಪ್ಪ ಮತ್ತು ಹಿಂಡಸಘಟ್ಟ ಕ್ಯಾಂಪಿನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಅರುಣ್ ಕುಮಾರ್ ಅವರು ಆಯ್ಕೆಯಾಗಿದ್ದಾರೆ.

ಅತ್ಯುತ್ತಮ ಎಸ್‌ಡಿಎಂಸಿ ಪ್ರಶಸ್ತಿಯನ್ನು ಮಲೆಬೆನ್ನೂರಿನ ಪಿಡಬ್ಲ್ಯೂಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪಡೆದಿದೆ ಎಂದು ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ರಾಜ್ಯಾಧ್ಯಕ್ಷ ಡಾ. ಸಿ.ಆರ್. ಚಂದ್ರಶೇಖರ್ ಮತ್ತು ಕಾರ್ಯದರ್ಶಿ ಈ.ಬಸವರಾಜು ತಿಳಿಸಿದ್ದಾರೆ.

## ನಗರದಲ್ಲಿ ಇಂದು - ನಾಳೆ ಕುರಿ, ಮೇಕೆ ಸಾಗಾಣಿಕೆ ತರಬೇತಿ

ಪಶು ಆಸ್ಪತ್ರೆ ಅವರಣದಲ್ಲಿರುವ ಪಶು ವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಇಂದು ಮತ್ತು ನಾಳೆ ಆಧುನಿಕ ಹೈನುಗಾರಿಕೆ ತರಬೇತಿ ಶಿಬಿರ ನಡೆಯಲಿದೆ. ವಿವರಕ್ಕೆ ಸಂಪರ್ಕಿಸುವ ದೂರವಾಣಿ 08192-233787.

## ನಗರದಲ್ಲಿ ಇಂದು ಅಂಚೆ ಜನಸಂಪರ್ಕ ಅಭಿಯಾನ

ಭಾರತೀಯ ಅಂಚೆ ಇಲಾಖೆ, ದಾವಣಗೆರೆ ಅಂಚೆ ವಿಭಾಗದ ವತಿಯಿಂದ ದೇವರಾಜ ಅರಸು ಬಡಾವಣೆ, ವಿನೋಬನಗರ, ಮಿನಿ ವಿಧಾನಸೌಧ ಹಾಗೂ ಬಿಎಲ್ ರೋಡ್ ಅಂಚೆ ಕಛೇರಿಗಳ ಸಹ ಭಾಗಿತ್ವದಲ್ಲಿ ಅಂಚೆ ಜನಸಂಪರ್ಕ ಅಭಿಯಾನ 'ಅಂಚೆ ಕಛೇರಿ ಎಲ್ಲಾ ಸೇವೆಗಳು ಒಂದೇ ಸೂರಿ ನಡಿಯಲ್ಲಿ' ಕಾರ್ಯಕ್ರಮವು ಇಂದು ನಡೆಯಲಿದೆ.

ಪಿಎಲ್‌ಐ, ಆರ್‌ಪಿಎಲ್‌ಐ ಮತ್ತು ಎಸ್‌ಬಿ, ಆರ್‌ಡಿ, ಎಂಎಸ್‌ಎಸ್‌ಸಿ ಖಾತೆ ಮತ್ತು ಐಪಿಪಿಬಿ ಖಾತೆಗಳ ತೆರೆಯುವಿಕೆ, ಆಧಾರ್ ಸೀಡಿಂಗ್, ಅಪಘಾತ ವಿಮೆ ಪಾಲಿಸಿಗಳು (GAG) ಮುಂತಾದ ಅಂಚೆ ಕಛೇರಿಯ ಸೇವೆಗಳು ಒಂದೇ ಸೂರಿನಡಿಯಲ್ಲಿ ಎಂಬ ಕಾರ್ಯಕ್ರಮ ನಡೆಯಲಿದ್ದು, ಸಾರ್ವ ಜನಿಕರು ಇದರ ಸದುಪಯೋಗಪಡಿಸಿಕೊಳ್ಳಲು ಅಂಚೆ ಅಧೀಕ್ಷಕರು ತಿಳಿಸಿದ್ದಾರೆ.

## ಕೃಷಿ ಹೊಂಡಗಳಿಗೆ ಅರ್ಜಿ ಆಹ್ವಾನ

ದಾವಣಗೆರೆ, ಡಿ.29- ಕ್ಷೇತ್ರ ಬದು ನಿರ್ಮಾಣ, ನೀರು ಸಂಗ್ರಹಣಾ ರಚನೆ (ಕೃಷಿ ಹೊಂಡ), ನೀರು ಇಂಗದಂತೆ ತಡೆಯಲು ಪಾಲಿಥಿನ್ ಹೊದಿಕೆ, ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ, ಹೊಂಡದಿಂದ ನೀರು ಎತ್ತಲು ಡೀಸೆಲ್/ಸೋಲಾರ್ ಪಂಪ್ ಸೆಟ್ ಮತ್ತು ನೀರನ್ನು ಬೆಳೆಗೆ ಹಾಯಿಸಲು ಸೂಕ್ಷ್ಮ (ತುಂತುರು/ಹನಿ) ನೀರಾವರಿ ಘಟಕಗಳಿಗೆ ಕೃಷಿ ಇಲಾಖೆಯಿಂದ ಕೃಷಿ ಭಾಗ್ಯ ಯೋಜನೆಯಡಿ ಅರ್ಜಿ ಆಹ್ವಾನಿಸಲಾಗಿದೆ.

ಕೃಷಿ ಭಾಗ್ಯ ಪ್ಯಾಕೇಜ್‌ನಲ್ಲಿ ಒಟ್ಟಾರೆ 6 ಕಡ್ಡಾಯ ಘಟಕಗಳನ್ನು ಒಳಗೊಂಡಿದ್ದು ಎಲ್ಲಾ ಘಟಕಗಳನ್ನು ಫಲಾನುಭವಿ ರೈತರು ಯೋಜನೆಯ ಸಮಗ್ರ ಸದುಪಯೋಗ ಪಡೆಯಲು ತಪ್ಪದೇ ಅಳವಡಿಸುವುದು ಕಡ್ಡಾಯವಾಗಿರುತ್ತದೆ.

ರೈತರು ಸದರಿ ಸೌಲಭ್ಯಗಳನ್ನು ಪಡೆಯಲು ಕೂಡಲೇ ಸಂಬಂಧಿಸಿದ ಹೋಬಳಿಯ ರೈತ ಸಂಪರ್ಕ ಕೇಂದ್ರಗಳನ್ನು ಸಂಪರ್ಕಿಸಲು ಸಹಾಯಕ ಕೃಷಿ ನಿರ್ದೇಶಕ ಶ್ರೀಧರಮೂರ್ತಿ ಡಿ.ಎಂ. ತಿಳಿಸಿದ್ದಾರೆ.

## ಹ್ಯಾಂಡಲ್ ಇಲ್ಲದ ಬೈಕ್ ಮೇಲೆ ಕನ್ನಡ ಧ್ವಜ ಜಾಗ್ರತೆ



### ಜಾಥಾ ಹೊರಟ ಈರಣ್ಣ ಕುಂದರಿಮಠ್ : ಸ್ವಾಗತಿಸಿ ಆತಿಥ್ಯ ನೀಡಿದ ಹರಪನಹಳ್ಳಿ

ಹರಪನಹಳ್ಳಿ, ಡಿ. 29 - ಹ್ಯಾಂಡಲ್ ಇಲ್ಲದ ಬೈಕ್ ಸಾಹಸ ಮೂಲಕ ಕಲಬುರಗಿಯಿಂದ ಬೆಂಗಳೂರಿಗೆ ಕನ್ನಡ ಜಾಗ್ರತೆ ಜಾಥಾ ಹೊರಟ ಈರಣ್ಣ ಕುಂದರಿಮಠ್ ಹರಪನಹಳ್ಳಿಗೆ ಬಂದಾಗ ಅದ್ದೂರಿಯಾಗಿ ಸ್ವಾಗತಿಸಿ ಆತಿಥ್ಯ ಮಾಡಿ ಬೀಳ್ಕೊಡಲಾಯಿತು.

ಕರ್ನಾಟಕಕ್ಕೆ 50 ರ ಸುವರ್ಣ ಸಂಭ್ರಮದ ಮಹೋತ್ಸವ ಹಾಗೂ 68 ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ಕಲಬುರಗಿ ಜಿಲ್ಲಾಡಳಿತ ಭವನದಿಂದ ವಿಶೇಷ ಬೈಕ್ ಸಾಹಸ ಕ್ರೀಡೆಯನ್ನು ಹಮ್ಮಿಕೊಂಡು ಕನ್ನಡ ನಾಡು, ನುಡಿಗೆ ವಿಶಿಷ್ಟ ಜಾಗೃತಿ ಮೂಡಿಸಲು ಸುಮಾರು 860 ಕಿಮೀ ದೂರದ ಬೆಂಗಳೂರು ವರೆಗೆ ನಾಡು, ನುಡಿಗೆ ಜಾಗೃತಿಯನ್ನು ಮೂಡಿಸಲು ಹ್ಯಾಂಡಲ್ ಇಲ್ಲದ ಬೈಕ್‌ನ್ನು ಓಡಿಸುತ್ತ ಕಲಬುರಗಿಯಿಂದ ಜೇವರ್ಗಿ, ಶಹಾಪುರ, ಸುರಪುರ, ಲಿಂಗಸಗೂರ, ಮಸ್ಕಿ, ಸಿಂಧನೂರು, ಕಾರಟಗಿ, ಗಂಗಾವತಿ, ಹೊಸಪೇಟೆ, ಹಗರಿಬೊಮ್ಮನಹಳ್ಳಿ, ಹರಪನಹಳ್ಳಿ, ಹರಿಹರ, ಹೊನ್ನಳಿ, ಶಿವಮೊಗ್ಗ, ಭದ್ರಾವತಿ, ತರೀಕೆರೆ, ಕಡೂರ, ಅರಸೀಕೆರೆ, ತಿಪಟೂರು, ತುಮಕೂರು ಮಾರ್ಗವಾಗಿ ಬೆಂಗಳೂರು ವರೆಗೆ ವಿಧಾನ ಸೌಧದ ವರೆಗೆ ಸುಮಾರು 860 ಕಿಮೀ ಕ್ರಮಿಸಿ ಕನ್ನಡ ನಾಡು ನುಡಿಗೆ ಜಾಗೃತಿಯನ್ನು ಮೂಡಿಸುತ್ತ ಕೆಎ 29 ಹ್ಯಾಂಡಲ್ ಇಲ್ಲದ ಬೈಕ್ ಮೇಲೆ ಕನ್ನಡ ಧ್ವಜವನ್ನು ಹಿಡಿದುಕೊಂಡು ಸುತ್ತುತ್ತಾರೆ.

ಈ ವೇಳೆ ಕನ್ನಡ ಸಾಹಿತ್ಯ ಪರಿಷತ್ತು ತಾಲ್ಲೂಕು ಅಧ್ಯಕ್ಷ ಕೆ. ಉಚ್ಚಂಗೆಪ್ಪ, ಎಸ್.ಯು.ಜೆ.ಎಂ. ಕಾಲೇಜು ಪ್ರಾಂಶುಪಾಲ ಎಚ್. ಮಲ್ಲಿಕಾರ್ಜುನ್, ಜೆ.ಸಿ.ಐ. ಅಧ್ಯಕ್ಷ ಪರಶುರಾಮ ಚಲವಾದಿ, ಕಾರ್ಯದರ್ಶಿ ಶರತ್ ಚಂದ್ರ, ಪ್ರಸನ್ನಕುಮಾರ ಜೈನ್, ಪಿ.ಟಿ. ನಾಗರಾಜ್, ಜೀವಜಲ ಟ್ರಸ್ಟ್ ಅಧ್ಯಕ್ಷ ಹೇಮಣ್ಣ ಮೊರಿಗೇರಿ, ಎಲ್‌ಐಸಿ ಪ್ರತಿನಿಧಿಗಳಾದ ಎಂ. ವೀರಭದ್ರಪ್ಪ, ಎ. ರೇವಣ್ಣ, ಕೊಟ್ಟೂರಿನ ಕೆ. ಶಿವರಾಜ್, ಹುಲಿಕಟ್ಟಿ ಮಂಜುನಾಥ, ಯರಬಳ್ಳಿ ಮಂಜುನಾಥ, ಕೊಂಗನ ಹೊಸೂರು ಎಂ. ಈಶ್ವರಪ್ಪ, ಅಲ್ಲದೇ ಶ್ರವಣ್ ಕುಮಾರ, ಶಶಿಕುಮಾರ್, ಶಾಂತ ಅಕ್ಕಿ , ನಿವೃತ್ತ ಶಿಕ್ಷಕ ಶಿವಾನಂದಪ್ಪ, ಜಾಲಗಾರ ಕೊಟ್ರೇಶ್, ನಿ. ಖಜಾನಿ ಅಧಿಕಾರಿ ಕೊಟ್ರಬಸಪ್ಪ ಮುಂತಾದವರು ಭಾಗವಹಿಸಿದ್ದರು.


## ಎಲೆಬೇತೂರಿನಲ್ಲಿ ಇಂದು ಶ್ರೀ ಬಂಡೆ ರಂಗಪ್ಪ ಸ್ವಾಮಿಯ ಕಾರ್ತಿಕೋತ್ಸವ



ದಾವಣಗೆರೆ ತಾ. ಎಲೆಬೇತೂರು ಗ್ರಾಮದ ಪುಟಗನಾಳು ರಸ್ತೆಯಲ್ಲಿರುವ ಶ್ರೀ ಬಂಡೆ ರಂಗಪ್ಪ ಸ್ವಾಮಿಯ ಕಾರ್ತಿಕೋತ್ಸವ ಇಂದು ಸಂಜೆ 6 ಗಂಟೆಗೆ ನಡೆಯಲಿದೆ. ಸಂಜೆ ಶ್ರೀ ಬಂಡೆ ರಂಗಪ್ಪ ಸ್ವಾಮಿಗೆ ಪುಷ್ಪಾರ್ಚನೆ, ಬಿಲ್ವಾರ್ಚನೆ, ಮಹಾ ಮಂಗಳಾರತಿ ಪಳಾರ ವಿನಿಯೋಗ ನಡೆಯಲಿದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (KSOU) ಮೈಸೂರು (UGC ಅನುಮೋದಿತ)
ಪರೀಕ್ಷಾ ಕೇಂದ್ರ ಅರಸಿಕೆರೆ ಹರಪನಹಳ್ಳಿ ತಾಲ್ಲೂಕು
ಪ್ರವೇಶಗಳು ಪ್ರಾರಂಭವಾಗಿವೆ Hurry Up
2023-24ರ ಶೈಕ್ಷಣಿಕ ಸಾಲಿನ (ಜನವರಿ ಆವೃತ್ತಿಯ)
ಸ್ನಾತಕ ಮತ್ತು ಸ್ನಾತಕೋತ್ತರ UG/PG ಕೋರ್ಸ್‌ಗಳಾದ
BA, B.Com, BBA, B.Sc, BLis, BCA, MA (Al Sub), M.Com M.Sc (All Subjects) M.Lib, MBA, MCA, BSW, MSW ಹಾಗೂ PG Dilpoma
ಮುಂತಾದ ಕೋರ್ಸ್‌ಗಳ ಪ್ರವೇಶಾತಿ ಪ್ರಕ್ರಿಯೆ ಪ್ರಾರಂಭವಾಗಿದೆ. ಆಸಕ್ತ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಲು ಕೋರಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.
9535114063 / 96203 71544 / 97428 35642 / 08192 466045

ಅಂತಃಕರಣ ಕ್ಲಿನಿಕ್
MINDSS NEUROLINKS
ವಿಶ್ವವಿಖ್ಯಾತ ಪ್ರಸಿದ್ಧ ನುರಿತ ನರರೋಗ ತಜ್ಞರಿಂದ ನಿಮ್ಮ ಸಮಸ್ಯೆಗಳಿಗೆ ಚಿಕಿತ್ಸೆ ಮತ್ತು ಸಲಹೆಗಳನ್ನು ನೀಡಲಾಗುತ್ತದೆ...
(ನಿರಾಸಕ್ತಿ, ಆಂತಕ, ಭಯ, ತಲೆನೋವು, ಬೆನ್ನು ಹುರಿ, ಇತರೆ ನೋವುಗಳು, ಗಾಬರಿ, ಕೆಟ್ಟ ಆಲೋಚನೆಗಳು, ಗೀಳು, ನಿದ್ರಾಹೀನತೆ, ಸ್ವಪ್ನ ದೋಷ, ಪುರುಷತ್ವದ ತೊಂದರೆಗಳು, ಶೀಘ್ರ ಸ್ಖಲನ ಶಿಷ್ನದ ನಿಮಿರುವಿಕೆ ಇತ್ಯಾದಿ ನರರೋಗಗಳ ಸಮಸ್ಯೆಗೆ ಸಂಪರ್ಕಿಸಿ.)
ಸಲಹೆ ಫೀಸ್ ಕೇವಲ 400 ರೂ.ಗಳು ಮಾತ್ರ
ಸಂಪರ್ಕಿಸಿ :
ಡಾ।। ಸೋಂಪುರ ಸುಶೀಲ್‌ಕುಮಾರ್
ನುರಿತ ನರರೋಗ, ಮಾನಸಿಕ ಹಾಗೂ ಲೈಂಗಿಕ ತಜ್ಞ ವೈದ್ಯರು
ಫೋನ್ : 88849 76550

ಹುಟ್ಟುಹಬ್ಬದ ಶುಭಾಷಯಗಳು

ಸಮಾಜ ಸೇವಕರು, ಯುವ ಉತ್ಸಾಹಿಗಳು, ರಿಯಲ್ ಎಸ್ಟೇಟ್ ಉದ್ಯಮಿಗಳು, ದಾವಣಗೆರೆ ಅರ್ಬನ್ ಕೋ - ಆಪರೇಟಿವ್ ಬ್ಯಾಂಕ್ ಆಡಳಿತ ಮಂಡಳಿಯ ಮಾಜಿ ವಿಶೇಷ ಆಹ್ವಾನಿತರಾದ
ಶ್ರೀ ಬೆಳ್ಳೂಡಿ ಮಂಜುನಾಥ್
ಅವರಿಗೆ 50ನೇ ವರ್ಷದ ಜನ್ಮದಿನದ ಸುವರ್ಣ ಮಹೋತ್ಸವದ ಶುಭಾಷಯಗಳು.
ಶುಭ ಕೋರುವವರು :
ಬೆಳ್ಳೂಡಿ ಮಂಜುನಾಥ್ ವಾಯುವಿಹಾರ ಬಳಗ

# 'ಸುರಕ್ಷಾ ದಾವಣಗೆರೆ' ಆ್ಯಪ್ ಬಿಡುಗಡೆ

## ಸುರಕ್ಷತೆ ದೃಷ್ಟಿಯಿಂದ ಆ್ಯಪ್ ಬಳಕೆಗೆ ಉಮಾ ಪ್ರಶಾಂತ್ ಕರೆ



ದಾವಣಗೆರೆ, ಡಿ.29- ನಗರದ ಸುಸ್ಥಿರ ಅಭಿವೃದ್ಧಿಗೆ ಪೂರಕವಾಗಿರುವ ಸುರಕ್ಷಾ ದಾವಣಗೆರೆ ಆ್ಯಪ್ ಸುರಕ್ಷತೆಯ ದೃಷ್ಟಿ ಎಲ್ಲರಿಗೂ ಮುಖ್ಯವಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಹೇಳಿದರು.

ನಗರದ ಯುಬಿಡಿಟಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಶುಕ್ರವಾರ ದಾವಣಗೆರೆ ಸ್ಮಾರ್ಟ್‌ಸಿಟಿ ಲಿಮಿಟೆಡ್ ಅಭಿವೃದ್ಧಿ ಪಡಿಸಿರುವ 'ಸುರಕ್ಷಾ ದಾವಣಗೆರೆ' ಮೊಬೈಲ್ ಆ್ಯಪ್ ಬಿಡುಗಡೆ ಮಾಡಿ ಅವರು ಮಾತಾಡಿದರು.

ಸಂಕಷ್ಟದಲ್ಲಿರುವ ಜನತೆಗೆ ನೆರವಾಗುವ ನಿಟ್ಟಿನಲ್ಲಿ ಸುರಕ್ಷಾ ದಾವಣಗೆರೆ' ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ. ಕೇವಲ ದಾವಣಗೆರೆ ನಗರದವರಷ್ಟೇ ಅಲ್ಲದೇ, ಜಿಲ್ಲೆಯ ಎಲ್ಲರೂ ಈ ಆ್ಯಪ್ ಬಳಕೆ ಬಗ್ಗೆ ತಿಳಿದುಕೊಂಡು ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.

ಈ ಆ್ಯಪ್ ಬಗ್ಗೆ ಜಾಗೃತಿ ಮೂಡಿಸಲು ಕಾಲೇಜುಗಳಲ್ಲಿ ಅಭಿಯಾನ ನಡೆಸಲಾಗುತ್ತಿದೆ. ವಿದ್ಯಾರ್ಥಿಗಳಿಗೆ ಇದರಿಂದ ಸಾಕಷ್ಟು ಅನುಕೂಲವಾಗಲಿದೆ. ಈಗಾಗಲೇ 3 ಸಾವಿರಕ್ಕೂ ಹೆಚ್ಚು ಜನರು ತಮ್ಮ ಮೊಬೈಲ್‌ಗಳಲ್ಲಿ ಈ ಆ್ಸಪ್ ಡೌನ್‌ಲೋಡ್ ಮಾಡಿಕೊಂಡಿದ್ದಾರೆ.

ಸುರಕ್ಷತೆ ದೃಷ್ಟಿಯಿಂದ ನಗರದಲ್ಲಿ ಈಗಾಗಲೇ ಸಾಕಷ್ಟು ಸಿಸಿ ಕ್ಯಾಮೆರಾ ಅಳವಡಿಸಲಾಗಿದೆ. ತುರ್ತು ಸಂದರ್ಭಗಳಲ್ಲಿ ಧಾವಿಸುವ 16 ಇಆರ್‌ಎಸ್‌ಎಸ್ ವಾಹನಗಳಿವೆ. ಸಾರ್ವಜನಿಕರು ಅವುಗಳ ಸೇವೆ ಬಳಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಈ ವೇಳೆ ಸ್ಮಾರ್ಟ್‌ಸಿಟಿ ವ್ಯವಸ್ಥಾಪಕ ನಿರ್ದೇಶಕ ವೀರೇಶ್ ಕುಮಾರ್, ಹೆಚ್ಚುವರಿ ಎಸ್ಪಿಗಳಾದ ವಿಜಯ ಕುಮಾರ್ ಸಂತೋಷ್, ಮಂಜುನಾಥ್, ಕೆಎಸ್ಸಾರ್ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಸಿದ್ದೇಶ್ವರ, ಪ್ರಾದೇಶಿಕ ಸಾರಿಗೆ ಅಧಿಕಾರಿ ಸಿ.ಎಸ್. ಪ್ರಮುತೇಶ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕಿ ವಾಸಂತಿ ಉಪ್ಪಾರ್, ಯುಬಿಡಿಟಿ ಕಾಲೇಜು ಪ್ರಾಂಶುಪಾಲ ಡಿ.ಪಿ. ನಾಗರಾಜಪ್ಪ, ಸ್ಮಾರ್ಟ್‌ಸಿಟಿ ಡಿಜಿಎಂ ಮಮತಾ ಇತರರು ಇದ್ದರು.

## ನಗರದಲ್ಲಿ ಇಂದು ಕಾರ್ತಿಕ ದೀಪೋತ್ಸವ

ಪಿ.ಜೆ. ಬಡಾವಣೆಯ ಖಮಿತ್ಕರ್ ಈಶ್ವರಪ್ಪ ಶ್ರೀರಾಮ ದೇವಸ್ಥಾನದಲ್ಲಿ ಇಂದು ರಾತ್ರಿ 8 ಗಂಟೆಗೆ ಕಾರ್ತಿಕ ದೀಪೋತ್ಸವ ನಡೆಯಲಿದೆ ಎಂದು ರಾಜಾರಾಂ ಆರ್. ಖಮಿತ್ಕರ್ ತಿಳಿಸಿದ್ದಾರೆ.

# ಕನ್ನಡ ಕಡೆಗಣಿಸಿ ಅನ್ಯ ಭಾಷೆ ಅಪ್ಪಿಕೊಳ್ಳದಿರಿ



## ನೂತನ ವಿದ್ಯಾಸಂಸ್ಥೆಯ ಅಧ್ಯಕ್ಷ ಎನ್.ಪರಶುರಾಮನಗೌಡ

ದಾವಣಗೆರೆ, ಡಿ. 29- ಕನ್ನಡ ಕಡೆಗಣಿಸಿ ಬೇರೆ ಭಾಷೆಗಳನ್ನು ಒಪ್ಪಿಕೊಳ್ಳುವ, ಅಪ್ಪಿಕೊಳ್ಳುವ ಕ್ರಮ ಸರಿಯಲ್ಲ ಎಂದು ನೂತನ ವಿದ್ಯಾಸಂಸ್ಥೆಯ ಅಧ್ಯಕ್ಷ ಎನ್. ಪರಶುರಾಮನಗೌಡ ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಷತ್ತು ವತಿಯಿಂದ ಕುವೆಂಪು ಕನ್ನಡ ಭವನದಲ್ಲಿ 'ಹೆಸರಾಯಿತು ಕರ್ನಾಟಕ-ಉಸಿರಾಗಲಿ ಕನ್ನಡ' ಕರ್ನಾಟಕ ಸಂಭ್ರಮ-50 ಹಾಗೂ ವಿಶ್ವ ಮಾನವ ದಿನಾಚರಣೆ ಪ್ರಯುಕ್ತ ವಿಶೇಷ ಉಪನ್ಯಾಸ ಹಾಗೂ ಸಾಂಸ್ಕೃತಿಕ ಕಲರವ ಮಾಲಿಕೆ-2 ಹಾಗೂ 'ಅವಾಂತರ' ಹಾಸ್ಯ ಪ್ರಸಂಗಗಳು ಕೃತಿ ಲೋಕಾರ್ಪಣೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯಕ್ಕೆ 'ಕರ್ನಾಟಕ' ಎಂದು ನಾಮಕರಣಗೊಂಡು ಐವತ್ತು ವರ್ಷಗಳಾದರೂ ರಾಜಧಾನಿಯಲ್ಲಿ ಕನ್ನಡವನ್ನು ಹುಡುಕುವ ಪರಿಸ್ಥಿತಿ ನಿರ್ಮಾಣವಾಗಿದೆ. ಬೆಂಗಳೂರಿನಲ್ಲಿ ಅನೇಕ ನಾಮಫಲಕಗಳಲ್ಲಿ ವ್ಯಾಕರಣ ದೋಷಗಳಿರುವುದು ದುರಂತ ಎಂದು ಹೇಳಿದರು.

ತಮಿಳು ನಾಡು ಸೇರಿದಂತೆ ನೆರೆಯ ರಾಜ್ಯಗಳಲ್ಲಿ ಜನರು ಅವರದ್ದೇ ಆದ ಭಾಷೆ ಮಾತನಾಡುತ್ತಾರೆ. ಆದರೆ ನಾವು ಬೇರೆ ರಾಜ್ಯಗಳ ಜನತೆ ಜೊತೆಗೆ ಅವರದ್ದೇ ಭಾಷೆಯಲ್ಲಿ ಮಾತನಾಡುವುದರಿಂದ ಅನ್ಯಭಾಷಿಗರು ಬಂದು ಐವತ್ತು ವರ್ಷಗಳ ಕಳೆದರೂ ಕನ್ನಡ ಭಾಷೆ ಕಲಿಯುತ್ತಿಲ್ಲ. ಮೊದಲು ನಾವು ಕನ್ನಡ ಮಾತನಾಡಬೇಕು. ಅನ್ಯ ಭಾಷಿಗರಿಗೆ ಕನ್ನಡ ಕಲಿಸಬೇಕು ಎಂದು ಹೇಳಿದರು.

ಇಂದು ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಮಕ್ಕಳು ಕನ್ನಡ ಮಾತನಾಡಿದರೆ ಶಿಕ್ಷೆ ವಿಧಿಸಲಾಗುತ್ತಿದೆ. ಇದು ತಪ್ಪು. ಮಕ್ಕಳು ಕನ್ನಡ ಮಾತನಾಡಲು ಅವಕಾಶ ನೀಡಬೇಕು ಎಂದು ಹೇಳಿದರು.

ಕುವೆಂಪುರವರ ಬದುಕು-ಬರಹ ಕುರಿತು ಉಪನ್ಯಾಸ ನೀಡಿದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಪ್ರಾಂಶುಪಾಲ ಡಾ.ಎಂ. ಮಂಜಣ್ಣ ಮಾತನಾಡಿ, ನಾನೇ ಶ್ರೇಷ್ಠ ಎನ್ನುವ ಮನಸ್ಥಿತಿ, ಅಸಮಾನತೆ ತುಂಬಿರುವ ಪ್ರಸ್ತುತ ದಿನಗಳಲ್ಲಿ ಸಾಮಾಜಿಕ ಸ್ವಾಸ್ಥ್ಯ ಹೇಗೆ ಕಟ್ಟಬೇಕು ಎಂಬ ಪ್ರಶ್ನೆಗೆ ಕುವೆಂಪು ಅವರ ಕೃತಿಗಳಲ್ಲಿ ಉತ್ತರವಿದೆ ಎಂದರು.

ಕುವೆಂಪು ಅವರು ಅಂದೇ ಅಸಮಾನತೆ ಸೇರಿದಂತೆ ಹಲವು ಸಮಸ್ಯೆಗಳಿಗೆ ತಮ್ಮ ಕೃತಿಗಳ ಮೂಲಕ ಉತ್ತರ ಕೊಡುವ ಕೆಲಸವನ್ನು ನಿರಂತರವಾಗಿ ಮಾಡಿದ್ದರು ಎಂದು ತಿಳಿಸಿದರು.

ಇಂದು ಪ್ರಜಾಸತ್ತಾತ್ಮಕ ಆಶಯವನ್ನು ಇಟ್ಟುಕೊಂಡಿರುವ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕುವೆಂಪುರವರ ಪ್ರಜಾಸತ್ತಾತ್ಮಕ ಆಶಯಗಳು ಇಂದು ನಮಗೆ ಬಹುದೊಡ್ಡ ನಿರೀಕ್ಷೆಗಳಾಗಿ ಕಾಣುತ್ತವೆ ಎಂದರು.

ಅಧ್ಯಕ್ಷತೆ ವಹಿಸಿ, ಬಿ.ಎಸ್. ಸಿದ್ದೇಶ್ ರವರು ರಚಿಸಿರುವ ಅವಾಂತರ ಕೃತಿಯ ಲೋಕಾರ್ಪಣೆ ಮಾಡಿದ ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾಧ್ಯಕ್ಷ ಬಿ.ವಾಮದೇವಪ್ಪ ಮಾತನಾಡುತ್ತಾ, 50 ಹಾಸ್ಯ ಪ್ರಸಂಗಗಳನ್ನು ಸೃಷ್ಟಿಸಿ ಅವುಗಳನ್ನು ಅವಾಂತರ ಎನ್ನುವ ಹಾಸ್ಯ ಪುಸ್ತಕದ ರೂಪದಲ್ಲಿ ಹೊರತೊಂದು ಸಿದ್ದೇಶ್ ಓದಿಗರಿಗೆ ಅರ್ಪಿಸಿದ್ದಾರೆ. ಮುಂದೆ ಇಂತಹ ಹಲವಾರು ಕೃತಿಗಳು ಅವರಿಂದ ಹೊರಬರಲಿ ಎಂದು ಆಶಿಸುತ್ತಾ ಕನ್ನಡ ಸಾಹಿತ್ಯ ಪರಿಷತ್ತು ಸದಾ ಅವರೊಟ್ಟಿಗೆ ಇರುತ್ತದೆ ಎಂದು ತಿಳಿಸಿದರು.

ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞ ಡಾ.ಹಾಲೇಶ್ ಬಿ., ಲೇಖಕ ಸಿದ್ದೇಶ್ ಬಿ.ಎಸ್. ವೇದಿಕೆ ಮೇಲಿದ್ದರು. ಜಾನಪದ ತಜ್ಞ ಡಾ.ಎಂ.ಜಿ. ಈಶ್ವರಪ್ಪ, ಸಾಹಿತಿ ಬಾ.ಮ. ಬಸವರಾಜ್, ಆವರಗೆರೆ ರುದ್ರಮುನಿ ಇತರರು ಉಪಸ್ಥಿತರಿದ್ದರು. ಕಸಾಪ ಕೋಶಾಧ್ಯಕ್ಷ ಕೆ.ರಾಘವೇಂದ್ರ ನಾಯರಿ ಕಾರ್ಯಕ್ರಮ ನಿರೂಪಿಸಿದರು.

# ಜನವರಿಯಲ್ಲಿ ಉದ್ಯೋಗ ಮೇಳ

ಬೆಂಗಳೂರು, ಡಿ. 29 – ಮುಂಬರುವ ಜನವರಿ ಕೊನೆ ವಾರದಲ್ಲಿ ಬೃಹತ್ ಉದ್ಯೋಗ ಮೇಳ ಆಯೋಜಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಇದಕ್ಕಾಗಿ ಆರು ಸಚಿವರ ತಂಡವನ್ನು ರಚಿಸಲಾಗಿದೆ.

ಉದ್ಯೋಗ ಮೇಳದ ಸಿದ್ಧತೆಗಾಗಿ ಸಿದ್ದರಾಮಯ್ಯ ಅವರು ಸಚಿವರ ಜೊತೆ ಶುಕ್ರವಾರ ಚರ್ಚೆ ನಡೆಸಿದ್ದಾರೆ. ಈ ತಂಡದಲ್ಲಿ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್, ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ, ಕೌಶಲ್ಯಾಭಿವೃದ್ಧಿ ಸಚಿವ ಶರಣ್ ಪ್ರಕಾಶ್ ಪಾಟೀಲ್, ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್, ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವ ಬಿ. ನಾಗೇಂದ್ರ, ಕಾರ್ಮಿಕ ಸಚಿವ ಸಂತೋಷ್ ಲಾಡ್ ಹಾಗೂ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರಿದ್ದಾರೆ.

ಸಚಿವರ ತಂಡವು ಉದ್ಯೋಗದಾತ ಕಂಪನಿಯವರೊಂದಿಗೆ ಸಭೆ ನಡೆಸಿ ಚರ್ಚಿಸಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕ್ರಮ ವಹಿಸಲಿದೆ. ಜೊತೆಗೆ ಕೈಗಾರಿಕೆಗಳೊಂದಿಗೆ ಚರ್ಚಿಸಿ, ಉದ್ಯೋಗಾಕಾಂಕ್ಷಿಗಳ ಕೌಶಲ್ಯ ಹಾಗೂ ಕೈಗಾರಿಕೆಗಳ ಅಗತ್ಯತೆಯ ನಡುವಿನ ಅಂತರ ಸರಿಪಡಿಸುವ ಬಗ್ಗೆ ದೂರಗಾಮಿ ಕಾರ್ಯಕ್ರಮಗಳನ್ನು ರೂಪಿಸುವ ಬಗ್ಗೆ ಶಿಫಾರಸ್ಸು ಮಾಡಲಿದೆ ಮತ್ತು ವಿದೇಶದಲ್ಲಿರುವ ಉದ್ಯೋಗಾವಕಾಶಗಳ ಕುರಿತು ಪರಿಶೀಲನೆ ನಡೆಸಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

# ಮತದಾರರ ಪಟ್ಟಿ ಪರಿಷ್ಕರಣೆಗೆ ಅವಕಾಶ

ದಾವಣಗೆರೆ, ಡಿ. 29 - ಭಾರತ ಚುನಾವಣಾ ಆಯೋಗವು ಭಾವಚಿತ್ರವಿರುವ ಮತದಾರರ ಪಟ್ಟಿಗಳ ವಿಶೇಷ ಸಂಕ್ಷಿಪ್ತ ಪರಿಷ್ಕರಣಾ ವೇಳಾಪಟ್ಟಿ ಪರಿಷ್ಕರಿಸಿದ್ದು ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸಲು ಬರುವ ಜನವರಿ 12ರ ವರೆಗೆ ಅವಕಾಶ ಕಲ್ಪಿಸಲಾಗಿದೆ.

ತಿದ್ದುಪಡಿ ಮತದಾರರ ಪಟ್ಟಿಯನ್ನು ಜನವರಿ 17 ರಂದು ಪ್ರಕಟಿಸಿ ಅಂತಿಮ ಮತದಾರರ ಪಟ್ಟಿಯನ್ನು ಜನವರಿ 22 ರಂದು ಪ್ರಕಟಿಸಲಾಗುತ್ತದೆ. ಮತದಾರರು ಭಾವಚಿತ್ರವಿರುವ ಮತದಾರರ ಪಟ್ಟಿಯಲ್ಲಿನ ಪರಿಷ್ಕರಣೆಗೆ ಸಂಬಂಧಿಸಿದ ತಿದ್ದುಪಡಿ, ಸೇರ್ಪಡೆ, ವರ್ಗಾವಣೆಗೆ ಸಂಬಂಧಿಸಿದಂತೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ತಿಳಿಸಿದ್ದಾರೆ.

# ಹೆದ್ದಾರಿಗಳ ನಿರ್ಮಾಣದಲ್ಲಿ ಘನತ್ಯಾಜ್ಯ ಬಳಕೆಯ ಯೋಜನೆ



ನವದೆಹಲಿ, ಡಿ. 29 – ಘನತ್ಯಾಜ್ಯವನ್ನು ಹೆದ್ದಾರಿ ಯೋಜನೆಗಳಲ್ಲಿ ಬಳಸುವ ಪ್ರಾಯೋಗಿಕ ಯೋಜನೆಗಳಲ್ಲಿ ಯಶಸ್ಸು ದೊರೆತಿದೆ. ಈ ಹಿನ್ನೆಲೆಯಲ್ಲಿ ಅಜೈವಿಕ ಘನ ತ್ಯಾಜ್ಯವನ್ನು ರಸ್ತೆಗಳ ಒಡ್ಡುಗಳ ನಿರ್ಮಾಣಕ್ಕೆ ಬಳಸುವ ಪ್ರಸ್ತಾವನೆಯನ್ನು ಕೇಂದ್ರ ಹೆದ್ದಾರಿ ಸಚಿವಾಲಯ ರೂಪಿಸಿದೆ.

ಘನತ್ಯಾಜ್ಯವನ್ನು ಹೆದ್ದಾರಿ ರೂಪಿಸಲು ಬಳಸುವ ಬಗ್ಗೆ ಕೇಂದ್ರ ರಸ್ತೆ ಸಾರಿಗೆ ಹಾಗೂ ಹೆದ್ದಾರಿ ಸಚಿವಾಲಯ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಗಳು ಎರಡು ಪ್ರಾಯೋಗಿಕ ಯೋಜನೆ ಕೈಗೊಂಡಿದ್ದವು.

ದೆಹಲಿ - ಎನ್.ಸಿ.ಆರ್. ರಸ್ತೆ ಹಾಗೂ ದೆಹಲಿ - ಮುಂಬೈ ಎಕ್ಸ್‌ಪ್ರೆಸ್‌ವೇಗಳಲ್ಲಿ ಈ ಪ್ರಯೋಗ ಕೈಗೊಳ್ಳಲಾಗಿತ್ತು. ಎರಡೂ ಕಡೆಗಳಲ್ಲಿ ಗುಣಮಟ್ಟದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗಿತ್ತು.

ಘನತ್ಯಾಜ್ಯ ಪರಿಸರಕ್ಕೆ ದೊಡ್ಡ ಸವಾಲಾಗಿದೆ. ಘನತ್ಯಾಜ್ಯ ವಿಲೇವಾರಿಗೆ 10 ಸಾವಿರ ಹೆಕ್ಟೇರ್ ಜಮೀನು ಬಳಕೆಯಾಗುವ ಅದಾಜಿದೆ.

ಹೆದ್ದಾರಿಗಳಲ್ಲಿ ಒಡ್ಡುಗಳನ್ನು ನಿರ್ಮಿಸಲು ಸಾಕಷ್ಟು ಮಣ್ಣು ಬಳಕೆಯಾಗುತ್ತಿದೆ. ಇದನ್ನು ಕೃಷಿ ಭೂಮಿಯಿಂದ ಪಡೆಯಲಾಗುತ್ತಿದೆ. ಇದರ ಬದಲು ಘನತ್ಯಾಜ್ಯ ಬಳಸಲು ಸಾಕಷ್ಟು ಅವಕಾಶವಿದೆ ಎಂದು ಸಚಿವಾಲಯ ಹೇಳಿದೆ.

# 1.5 ಲಕ್ಷ ಟನ್ ಕೊಬ್ಬರಿ ಖರೀದಿಗೆ ಹೆಚ್ಡಿಕೆ ಒತ್ತಾಯ

ಬೆಂಗಳೂರು, ಡಿ. 29 - ಕೇಂದ್ರ ಸರ್ಕಾರ ಕೊಬ್ಬರಿಗೆ ಬೆಂಬಲ ಬೆಲೆ ನೀಡಿರುವುದು ಸ್ವಾಗತಾರ್ಹ ಕ್ರಮವಾಗಿದ್ದು, ರಾಜ್ಯದಲ್ಲಿ ನಾಫೆಡ್ ಮೂಲಕ 1.5 ಲಕ್ಷ ಮೆಟ್ರಿಕ್ ಟನ್ ಕೊಬ್ಬರಿ ಖರೀದಿಸಬೇಕು ಎಂದು ಕೇಂದ್ರ ಸರ್ಕಾರ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮನವಿ ಮಾಡಿದ್ದಾರೆ. ಈ ಬಗ್ಗೆ ಟ್ವೀಟ್ ಮಾಡಿರುವ ಅವರು, ಕೊಬ್ಬರಿ ಬೆಲೆ ಕುಸಿತದಿಂದ ಸಂಕಷ್ಟಕ್ಕೆ ಸಿಲುಕಿರುವ ತೆಂಗು ಬೆಳೆಗಾರರ ನೆರವಿಗೆ ಧಾವಿಸಿದ ಕೇಂದ್ರ ಸರ್ಕಾರ ಹಾಗೂ ಪ್ರಧಾನಿ ಮೋದಿ ಅವರಿಗೆ ರಾಜ್ಯದ ಸಮಸ್ತ ರೈತರ ಪರವಾಗಿ ಕೃತಜ್ಞತೆಗಳು, ಮಿಲ್ಲಿಂಗ್ ಕೊಬ್ಬರಿಗೆ ಪ್ರತಿ ಕ್ವಿಂಟಾಲ್‌ಗೆ 300 ರೂ. ಹಾಗೂ ಉಂಡೆ ಕೊಬ್ಬರಿಗೆ 250 ರೂ. ಏರಿಕೆ ಮಾಡಿರುವ ಕೇಂದ್ರದ ನಿರ್ಧಾರ ಸ್ವಾಗತಾರ್ಹ ಎಂದಿದ್ದಾರೆ.

# ಕೆಎಸ್ಸಾರ್ಟಿಸಿ ನಮ್ಮ ಕಾರ್ಗೋ ಟ್ರಕ್ ಸೇವೆ ಆರಂಭ

ದಾವಣಗೆರೆ, ಡಿ. 29 - ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಸರಕು ಸಾಗಾಟ ಮಾಡುವ ನಿಟ್ಟಿನಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ನಮ್ಮ ಕಾರ್ಗೋ ಟ್ರಕ್ ಸೇವೆಯನ್ನು ಪ್ರಾರಂಭಿಸಲಾಗಿದೆ.

ಸಾರಿಗೆ ನಿಗಮವು ಸರಕು ಸಾಗಾಟ ಮಾಡಲು 1 ರಿಂದ 100 ಕಿ.ಮೀ ಕಾರ್ಯ ಚರಣೆಗೆ ಪ್ರತಿ ಕಿ.ಮೀ ಗೆ 50 ರೂ, 200 ಕಿ.ಮೀ ಕಾರ್ಯಾಚರಣೆಗೆ ಪ್ರತಿ ಕಿ.ಮೀ ಗೆ 40ರೂ ಹಾಗೂ 200 ಕಿ.ಮೀ ಮೇಲ್ಪಟ್ಟ ಕಾರ್ಯಚರಣೆಗೆ ಪ್ರತಿ ಕಿ.ಮೀಗೆ ರೂ 35 ನಿಗದಿ ಪಡಿಸಲಾಗಿದೆ.

**ರಿಯಾಯಿತಿ ಸೌಲಭ್ಯ:** ಟ್ರಕ್ ಮೂಲಕ ಸರಕು ಸಾಗಾಣೆ ಸೌಲಭ್ಯ ಪಡೆಯುವ ಗ್ರಾಹಕ ಹಾಗೂ ಸಂಸ್ಥೆಗಳು ಹೋಗುವ ಮತ್ತು ಬರುವ ಎರಡು ಮಾರ್ಗದ ಸರಕು ಸಾಗಾಣೆಗಾಗಿ ಬುಕ್ಕಿಂಗ್ ಮಾಡಿದಲ್ಲಿ ಅಥವಾ ಖಚಿತವಾದ ವ್ಯವಹಾರ ನೀಡಿದಲ್ಲಿ ಅಂತವರ ಜೊತೆಯಲ್ಲಿ ಸೂಕ್ತ ಒಡಂಬಡಿಕೆ ಮಾಡಿಕೊಳ್ಳಲಾಗುವುದು.

ಟ್ರಕ್ ಬುಕ್ಕಿಂಗ್ ಮಾಡಲು ಹಾಗೂ ಹೆಚ್ಚಿನ ಮಾಹಿತಿಗಾಗಿ ವಿಭಾಗೀಯ ಸಂಚಾರಿ ಅಧಿಕಾರಿ ದೂ. 77609 90452, ವಿಭಾಗೀಯ ತಾಂತ್ರಿಕ ಅಭಿಯಂತರ ದೂ. 77609 90451, ಘಟಕ ವ್ಯವಸ್ಥಾಪಕರ ದೂ. 77609 90463ಗೆ ಸಂಪರ್ಕಿಸಬಹುದು.


ನಂಜಪ್ಪ ಹಾಸ್ಪಿಟಲ್ಸ್
ದಾವಣಗೆರೆ

ಆರೋಗ್ಯದ ಹಾದಿಯು ಇಲ್ಲಿಂದ ಪ್ರಾರಂಭವಾಗುತ್ತದೆ ನಮ್ಮ ಹಿರಿಯ ಮೆಡಿಕಲ್ ಆಂಕೊಲಾಜಿಸ್ಟನ್ನು ಸಂಪರ್ಕಿಸಿ

ಡಾ|| ಪ್ರಸಾದ್ ಪಿ ಗುಣಾರಿ

ಎಂಡಿ, ಡಿಎಂ (ಮೆಡಿಕಲ್ ಆಂಕೊಲಾಜಿ), ಅಡ್ಯಾರ್ ಕ್ಯಾನ್ಸರ್ ಇನ್‌ಸ್ಟಿಟ್ಯೂಟ್, ಚೆನ್ನೈ
ಯುರೋಪಿಯನ್ ಸೊಸೈಟಿ ಆಫ್ ಮೆಡಿಕಲ್ ಆಂಕೊಲಾಜಿ (ESMO) ನ ಸದಸ್ಯ

15 ವರ್ಷಗಳ ಪರಿಣತಿ

- ಘನ ಮಾರಕತೆಗಳಿಗೆ ಚಿಕಿತ್ಸೆ (ಕ್ಯಾನ್ಸರ್ ಟ್ಯೂಮರ್ಸ್)
- ಟಾರ್ಗೆಟೆಡ್ ಥೆರಪಿ
- ವೈಯಕ್ತಿಕ ಅನುಗುಣಗಳಿಗೆ ತಕ್ಕಂತೆ ಕೀಮೋಥೆರಪಿ ಚಿಕಿತ್ಸೆ ವ್ಯವಸ್ಥೆ
- ಇಮ್ಯುನೊಥೆರಪಿ

ದಾವಣಗೆರೆಯ
ನಂಜಪ್ಪ ಹಾಸ್ಪಿಟಲ್ಸ್ ನಲ್ಲಿ
ಅಪಾಯಿಂಟ್‌ಮೆಂಟ್ ಕಾಯ್ದಿರಿಸಲು
08192-260111 ಗೆ ಕರೆ ಮಾಡಿ



ಮಾಗನೂರು ಬಸಪ್ಪ ರಸ್ತೆ, ತರಳಬಾಳು ಲೇಔಟ್, ದಾವಣಗೆರೆ
08192-260111/7022260111


# ಬಂಡಾರಿಯ ಎರಡು ಆಸ್ತಿ ವಶಕ್ಕಾಗಿ ಇ.ಡಿ. ಅರ್ಜಿ

ನವದೆಹಲಿ, ಡಿ. 29 – ರಕ್ಷಣಾ ಡೀಲರ್ ಸಂಜಯ್ ಭಂಡಾರಿಗೆ ಸೇರಿದ ಬ್ರಿಟನ್‌ನಲ್ಲಿರುವ ಎರಡು ಆಸ್ತಿಗಳನ್ನು ವಶಕ್ಕೆ ತೆಗೆದುಕೊಳ್ಳಲು ಜಾರಿ ನಿರ್ದೇಶನಾಲಯ (ಇ.ಡಿ.) ನ್ಯಾಯಾಲಯದಲ್ಲಿ ಅರ್ಜಿ ದಾಖಲಿಸಿದೆ. ಈ ಮನೆಗಳ ಪೈಕಿ ಒಂದರಲ್ಲಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕ ವಾದ್ರಾ ಅವರ ಪತಿ ರಾಬರ್ಟ್ ವಾದ್ರಾ ನವೀಕರಿಸಿ ನೆಲೆಸಿದ್ದರು ಎಂದು ಆರೋಪಿಸಲಾಗಿದೆ. ಅಕ್ರಮ ಹಣದಿಂದ ಈ ಆಸ್ತಿಗಳನ್ನು ಖರೀದಿಸಲಾಗಿತ್ತು ಎಂದು ಜಾರಿ ನಿರ್ದೇಶನಾಲಯ ಆರೋಪಿಸಿದೆ. ಈ ಬಗ್ಗೆ ನ್ಯಾಯಾಲಯ ಜನವರಿ 29ರಂದು ವಿಚಾರಣೆ ನಡೆಸಲಿದೆ.

# ವೃದ್ಧಾಶ್ರಮಗಳ ಸಂಖ್ಯೆ ಕಡಿಮೆಯಾಗಲು ಮಕ್ಕಳೊಂದಿಗಿನ ಬಾಂಧವ್ಯ ಮುಖ್ಯ



## ಚೇತನ ಒಲಂಪಿಯಾಡ್ ಶಾಲೆಯ ಕಾರ್ಯಕ್ರಮದಲ್ಲಿ ಶಿಕ್ಷಣಾಧಿಕಾರಿ ಪುಷ್ಪಲತಾ

ದಾವಣಗೆರೆ, ಡಿ. 29 - ನಗರದ ಚೇತನ ಒಲಂಪಿಯಾಡ್ ಶಾಲೆಯಲ್ಲಿ 5ನೇ ಶಾಲಾ ವಾರ್ಷಿಕೋತ್ಸವ ಸಮಾರಂಭ ಆಯೋಜಿಸಲಾಗಿತ್ತು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ದಾವಣಗೆರೆ ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀಮತಿ ಪುಷ್ಪಲತಾ ಮಾತನಾಡಿ, ಮಕ್ಕಳಿಗಾಗಿ ಸಮಯವನ್ನು ನೀಡಬೇಕು ಎಂದು ಪೋಷಕರಿಗೆ ಕರೆ ನೀಡಿದರು.

ಮಕ್ಕಳು ತಮ್ಮ ಎಲ್ಲಾ ಸಂದರ್ಭಗಳನ್ನು ಮನೆಯಲ್ಲಿ ಹಂಚಿಕೊಳ್ಳಬೇಕು. ಭವಿಷ್ಯದಲ್ಲಿ ವೃದ್ಧಾಶ್ರಮಗಳ ಸಂಖ್ಯೆ ಕಡಿಮೆ ಯಾಗಲು ಮಕ್ಕಳೊಂದಿಗಿನ ಬಾಂಧವ್ಯ ಮುಖ್ಯ. ಮಕ್ಕಳೇ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಾಧ್ಯವಿಲ್ಲ. ಶಿಕ್ಷಕರು ಮತ್ತು ಪೋಷಕರು ಮಕ್ಕಳನ್ನು ಅರ್ಥೈಸಿಕೊಳ್ಳಬೇಕು. ಇತ್ತೀಚೆಗೆ ಮಕ್ಕಳ ಆತ್ಮಹತ್ಯಾ ಪ್ರಕರಣಗಳು ಹೆಚ್ಚಾಗುತ್ತಿವೆ. ಕಾರಣ ನಿರಾಶೆ. ಆ ಕಾರಣದಿಂದ ಮಕ್ಕಳಲ್ಲಿ ಆತ್ಮವಿಶ್ವಾಸವನ್ನು ತುಂಬಬೇಕು. ವಿಶ್ವಾಸದಿಂದ ಮಕ್ಕಳಲ್ಲಿ ಶಕ್ತಿ ತುಂಬಬೇಕು. ನಮ್ಮ ಭವಿಷ್ಯದ ಭಾರತಕ್ಕೆ ಜಗತ್ತಿಗೆ ಭವ್ಯ ಪ್ರಜೆಗಳ ಅವಶ್ಯಕತೆ ಇದೆ. ಇದರಲ್ಲಿ ಶಿಕ್ಷಕರಷ್ಟೇ ಮಹತ್ತರ ಜವಾಬ್ದಾರಿ ಪೋಷಕರದ್ದು ಇದೆ. ಶ್ರೀಕೃಷ್ಣನಂತಹ ಸಾರಥ್ಯ ವಹಿಸುವಂತಹ ನಾಯಕರಾಗಬೇಕು. ತೇನ್ ಸಿಂಗ್ ನಂತಹ ಉತ್ಸಾಹಿ ಹಿಮಾಲಯ ಪರ್ವತರೋಹಿಯನ್ನು ಸೃಷ್ಟಿಸಿದಂತಹ ತಾಯಿಯರಾಗಬೇಕು. 'ಜ್ಯೋತಿಯೇ ಆಗು ಜಗಕೆಲ್ಲ' ಎಂಬ ವಿಶಾಲವಾದ ಮನೋಭಾವದಿಂದ ಹರಸುವಂತಹ ತಾಯಂದಿರು ನಮ್ಮ ಕನ್ನಡ ನಾಡಿನವರು. ನಮ್ಮೊಳಗಿನ ಸಂಪತ್ತನ್ನು ನಮ್ಮ ಮಕ್ಕಳಿಗೆ ಕೊಟ್ಟಾಗ ಭವಿಷ್ಯದ ಸತ್ಪ್ರಜೆಗಳು ಖಂಡಿತಾ ನಿರ್ಮಾಣವಾಗುವರು ಎಂದು ತಿಳಿಸಿದರು.

ಶಾಲಾ ನಿರ್ದೇಶಕ ರಾಘವೇಂದ್ರ ಪ್ರಸಾದ್, ವಿ. ವಿ.ಕಿರಣ್, ಪ್ರಾಂಶುಪಾಲರಾದ ವಿನೋದ್, ಸತ್ಯನಾರಾಯಣ ರೆಡ್ಡಿ, ಮುಖ್ಯೋಪಾಧ್ಯಾಯ ಬಿ.ಎಂ. ಬಸವರಾಜಯ್ಯ ಹಾಗೂ ವಿದ್ಯಾರ್ಥಿ ನಿಲಯದ ಮುಖ್ಯಸ್ಥ ರೇವಣಸಿದ್ದಪ್ಪ ಅವರು ಉಪಸ್ಥಿತರಿದ್ದರು.

ಶಿಕ್ಷಕಿ ಶ್ರೀಮತಿ ತೇಜಸ್ವಿನಿ ಸ್ವಾಗತಿಸಿದರು. ಶ್ರೀಮತಿ ಸ್ಮಿತಾ ನಿರೂಪಿಸಿದರು. ಶ್ರೀಮತಿ ಅಕ್ಷತಾ ಪಿ. ವಂದಿಸಿದರು.


ಮ್ಯಾಂಗೊ ಹೋಟೆಲ್ಸ್-ನವೀನ್

Welcome 2024 On 31st Evening

mango.hotels Naveen

TOTAL UNLIMITED Evening 9 to 12

UNLIMITED
STARTERS
GALA DINNER
DESSERTS
LIQUORS (IMFL)
BEER, WINE
COCKTAILS & MOCKTAILS
MUSIC

STAG 1999/-
COUPLE 3499/-

M : 76187 94619 / 5

T&C APPLY

MANGO HOTELS-NAVEEN, DENTAL COLLEGE ROAD INVITES YOU TO CELEBRATE


## ಅಣಜಿ ವಡೇರಹಳ್ಳಿ ಚಂದ್ರಶೇಖರಪ್ಪ ನಿಧನ



ದಾವಣಗೆರೆ ದೇವರಾಜ ಅರಸ್ ಬಡಾವಣೆ, ಸಿ ಬ್ಲಾಕ್, 6ನೇ ಕ್ರಾಸ್, ಡೋರ್ ನಂ. 167ರ ವಾಸಿ ನಿವೃತ್ತ ಸೀನಿಯರ್ ಹೆಲ್ತ್ ಇನ್‌ಸ್ಪೆಕ್ಟರ್

**ಅಣಜಿ ವಡೇರಹಳ್ಳಿ ಚಂದ್ರಶೇಖರಪ್ಪ**

ಇವರು ದಿನಾಂಕ 29.12.2023ರ ಶುಕ್ರವಾರ ಬೆಳಿಗ್ಗೆ 10.45ಕ್ಕೆ ನಿಧನರಾದರೆಂದು ತಿಳಿಸಲು. ವಿಷಾದಿಸುತ್ತೇವೆ.

ಮೃತರಿಗೆ 84 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 30.12.2023ರ ಶನಿವಾರ ಬೆಳಿಗ್ಗೆ 10 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ

ಮೊ : 99646 26384, 96861 98620

## ಸವಿನೆನಪು



**ಶರಣ ದಿ. ಬೆನ್ನೂರು ಪ್ರಭಾಕರ್ (ಕಟ್ಟಿಗೆ ಡಿಪೋ)**

ಜನನ : 24.02.1961 ಲಿಂ. 30.12.2020

ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ ಹಾಗೂ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ಧರ್ಮಪತ್ನಿ : ಶ್ರೀಮತಿ ಸಾವಿತ್ರ ಬೆನ್ನೂರು ಪ್ರಭಾಕರ್
ಶ್ರೀಮತಿ ಪ್ರಿಯಾಂಕ ಎ.ಎಚ್, ಮತ್ತು ವಿಲಾಸ್ ಪಿ.,
ಚಿ. ವಿಕಾಸ್ ಪಿ. ಮತ್ತು ಬೆನ್ನೂರು ವಂಶಸ್ಥರು, ಬಂಧುಗಳು ಹಾಗೂ ಮಿತ್ರರು.